

ಚಿತ್ರನಟ ಸಿ.ಎಸ್.
ಅಶ್ವಥ್‌ರವರಿಗೆ
ಮಂತ್ರಾಲಯ
ಶ್ರೀರಾಘವೇಂದ್ರಸ್ವಾಮಿಗಳವರ
ಮಠದಿಂದ 'ವಿಜಯೀಂದ್ರ
ಪುರಸ್ಕಾರ' ಪ್ರಶಸ್ತಿಯನ್ನು
ಮೈಸೂರಿನ ಅವರ
ಸ್ವಗೃಹಕ್ಕೆ ತೆರಳಿ ಪ್ರದಾನ
ಮಾಡಲಾಯಿತು



ಗುಲ್ಬರ್ಗಾದ
ಶ್ರೀರಾಘವೇಂದ್ರಸ್ವಾಮಿಗಳವರ
ಮಠದಲ್ಲಿ
ಪ್ರಾರ್ಥನೋತ್ಸವದಲ್ಲಿ
ಶ್ರೀನರಸಿಂಹದೇವರ ಅಲಂಕಾರ



ರಾಮನಗರದ
ಶ್ರೀರಾಘವೇಂದ್ರಸ್ವಾಮಿಗಳವರ
ಮಠದಲ್ಲಿ ನೂತನವಾಗಿ
ನಿರ್ಮಿಸಿದ ರಥದೊಂದಿಗೆ
ದಾನಿಗಳು





## ಬೆಂಗಳೂರಿನ ಜಯನಗರದ ಶ್ರೀಮಠದಲ್ಲಿ ನಡೆದ ಆರಾಧನಾ ಮಹೋತ್ಸವದ ಒಂದು ಕಿರುನೋಟ




ಬೃಂದಾವನಕ್ಕೆ ವಿಶೇಷ ಅಲಂಕಾರ



ವಸಂತೋತ್ಸವದಲ್ಲಿ ಶ್ರೀಪ್ರಹ್ಲಾದರಾಜರು

ಭಕ್ತರೊಬ್ಬರು ಐದು ಕೆ.ಜಿ.
ಬೆಳ್ಳಿಯಲ್ಲಿ ನಿರ್ಮಿಸಿಕೊಟ್ಟ
ರಾಯರ ಪ್ರತೀಕವನ್ನು
ಶ್ರೀಪಾದಂಗಳವರು
ಅನಾವರಣಮಾಡುತ್ತಿರುವುದು





ಭಕ್ತರು ಕೊಟ್ಟ ಕಾಣಿಕೆಯಿಂದ
ನೂತನವಾಗಿ ನಿರ್ಮಿಸಿದ
ಬಂಗಾರದ ಕವಚವನ್ನು
ಶ್ರೀಪಾದಂಗಳವರು
ಅನಾವರಣಗೊಳಿಸುತ್ತಿರುವುದು

॥ ವಿದ್ಯಯಾಽಮೃತಮಶ್ನುತೇ ॥

# ಶ್ರೀಗುರುಸಾರ್ವಭೌಮ ಸಂಸ್ಕೃತ ವಿದ್ಯಾಪೀಠ

## ಮಂತ್ರಾಲಯ

## ವಾರ್ಷಿಕೋತ್ಸವ ಸಮಾರಂಭದ ಆಹ್ವಾನ ಪತ್ರಿಕೆ

**ದಿನಾಂಕ 12, 13, 14 ಅಕ್ಟೋಬರ್ 2007**

ಶ್ರೀರಾಘವೇಂದ್ರಸ್ವಾಮಿಗಳವರ ಮಠದಲ್ಲಿ ಪ್ರಾಚೀನ ಕಾಲದಿಂದಲೂ ನಡೆದು ಬಂದ ಪಾಠಶಾಲೆಯನ್ನು "**ಶ್ರೀಗುರುಸಾರ್ವಭೌಮ ಸಂಸ್ಕೃತ ವಿದ್ಯಾಪೀಠ**"ವನ್ನಾಗಿಸಿ ಅದಕ್ಕೊಂದು ರೂಪ ಕೊಟ್ಟವರೇ ಶ್ರೀಸುಜಯೀಂದ್ರತೀರ್ಥ ಶ್ರೀಪಾದಂಗಳವರು. ವಿಜಯದಶಮಿಯ ಪವಿತ್ರ ದಿನದಂದು ಹೊಸ ರೂಪ ತಾಳಿದ ಈ ವಿದ್ಯಾಪೀಠದ ವಾರ್ಷಿಕೋತ್ಸವವನ್ನು ಆಚರಿಸಲಾಗುವುದು. ಪ್ರತಿವರ್ಷದಂತೆ ಈ ವರ್ಷವೂ ಅನೇಕ ವಿಧವಾದ ಕಾರ್ಯಕ್ರಮಗಳನ್ನು ಉಭಯ ಶ್ರೀಪಾದಂಗಳವರ ಆಜ್ಞಾನುಸಾರ ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಅರ್ಹ ವಿದ್ಯಾರ್ಥಿಗಳನ್ನು ಕೋರಲಾಗಿದೆ.

### ಕಾರ್ಯಕ್ರಮಗಳು

**ದಿನಾಂಕ 12-10-2007**

ಬೆಳಗ್ಗೆ 9.00 ಗಂಟೆಗೆ

**ಭಾಷಣ ಸ್ಪರ್ಧೆ**

ವಿಷಯ : "ಸಂಸ್ಕೃತಾಧ್ಯಯನದ ಆವಶ್ಯಕತೆ"

* * *

ಮಧ್ಯಾಹ್ನ 3.00 ಗಂಟೆಗೆ

**ಅಂತ್ಯಾಕ್ಷರೀ**

ವಿಷಯ : ಶ್ರೀಸುಮಧ್ವವಿಜಯ,
ಶ್ರೀರಾಘವೇಂದ್ರವಿಜಯ, ಶ್ರೀರುಕ್ಮಿಣೀಶವಿಜಯ,
ಮಣಿಮಂಜರೀ, ಸುಂದರಕಾಂಡ (ತಾ.ನಿ.)





**ದಿನಾಂಕ 13-10-2007**

ಬೆಳಗ್ಗೆ 9.00 ಗಂಟೆಗೆ

**ಪ್ರಬಂಧ ರಚನಾ ಸ್ಪರ್ಧೆ**

ವಿಷಯ : "ವಿದ್ವಾನೇವವಿಜಾನಾತಿ ವಿದ್ವಜ್ಜನ ಪರಿಶ್ರಮಮ್"

* * *

ಮಧ್ಯಾಹ್ನ 3.00 ಗಂಟೆಗೆ

**ರಸಪ್ರಶ್ನೆ**

ವಿಷಯ : "ದ್ವೈತಸಿದ್ಧಾಂತ"

* * *

**ದಿನಾಂಕ 14-10-2007**

ಬೆಳಗ್ಗೆ 9.00 ಗಂಟೆಗೆ

**ಕಂಠಪಾಠ ಸ್ಪರ್ಧೆ**

ವಿಷಯ : ಸಂಪೂರ್ಣ ಭಗವದ್ಗೀತೆ,
ಸಂಪೂರ್ಣ ಶ್ರೀಸುಮಧ್ವವಿಜಯ, ಶ್ರೀರಾಘವೇಂದ್ರವಿಜಯ
(ಒಂದರಿಂದ ಐದು ಸರ್ಗಗಳು), ಸಂಪೂರ್ಣ ವಿಷ್ಣುಸಹಸ್ರನಾಮಸ್ತೋತ್ರ

**ಸಂಜೆ 6.00 ಗಂಟೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳು**

### ನಿಬಂಧನೆಗಳು

- ಸಂಸ್ಕೃತ ಭಾಷೆಯಲ್ಲಿ ಮಾತನಾಡುವುದು.
- 8 ವರ್ಷದಿಂದ 22 ವರ್ಷದ ಸರ್ವರೂ ಭಾಗವಹಿಸಬಹುದು.
- ಭಾಷಣದ ಕಾಲಾವಧಿ 5 ನಿಮಿಷ ಮಾತ್ರ.
- ಸ್ಪರ್ಧೆಗೆ ಹೆಸರನ್ನು ಕಳುಹಿಸಲು ಕೊನೆಯ ದಿನಾಂಕ 30-09-2007.
- ಶುಲ್ಕರಹಿತ ಪ್ರವೇಶ.
- ಅಭ್ಯರ್ಥಿಗಳ ಎರಡು ಭಾವಚಿತ್ರಗಳನ್ನು ಕಳುಹಿಸಬೇಕು.
- ಬೇರೆ ಪಟ್ಟಣದಿಂದ ಬರುವ ಸ್ಪರ್ಧಿಗಳಿಗೆ ಕನಿಷ್ಠ ವಾಹನ ಶುಲ್ಕವನ್ನು ನೀಡಲಾಗುವುದು.
- ಒಂದೊಂದು ವಿದ್ಯಾಪೀಠದಿಂದ ಐದು ಜನ ವಿದ್ಯಾರ್ಥಿಗಳಿಗೆ ಅವಕಾಶವಿದೆ.
- ವ್ಯವಸ್ಥಾಪಕರ ನಿರ್ಣಯವೇ ಅಂತಿಮ.

## ವಾರ್ಷಿಕೋತ್ಸವದ ವಿಶೇಷ ಉಪನ್ಯಾಸಗಳು

**12-10-2007**

**ಡಾ. ಸತ್ಯನಾರಾಯಣಾಚಾರ್ಯ**

ವಿಷಯ : ನ್ಯಾಯಶಾಸ್ತ್ರ

**ವಿದ್ವಾನ್ ಶ್ರೀ ಗಣಪತಿಭಟ್ಟರು**

ವಿಷಯ : ವ್ಯಾಕರಣಶಾಸ್ತ್ರ

**13-10-2007**

**ವಿದ್ವಾನ್. ಶ್ರೀ ಹರಿದಾಸಭಟ್ಟರು**

ವಿಷಯ : ದ್ವೈತವೇದಾಂತ

**14-10-2007**

**ವಿದ್ವಾನ್. ಶ್ರೀ ನರಸಿಂಹಾಚಾರ್ಯ**

ವಿಷಯ : ಅಲಂಕಾರಶಾಸ್ತ್ರ

ಶ್ರೀಗುರುಸಾರ್ವಭೌಮ
ಸಂಸ್ಕೃತ ವಿದ್ಯಾಪೀಠದ ವಿದ್ಯಾರ್ಥಿಗಳಿಂದ
"ಮಧ್ಯಮ ವ್ಯಾಯೋಗ" ಎನ್ನುವ ಸಂಸ್ಕೃತ ನಾಟಕವನ್ನು
ಮತ್ತು "ಪ್ರತಿಭಾಪ್ರದರ್ಶನ"ವನ್ನು
ಸಹ ವ್ಯವಸ್ಥೆಗೊಳಿಸಲಾಗಿದೆ.

ಸ್ವಾಗತವನ್ನು ಬಯಸುವವರು

**ರಾಜಾ. ಎಸ್. ರಾಜಗೋಪಾಲಾಚಾರ್ಯ**
ಶ್ರೀಪಾದಂಗಳವರ ಆಪ್ತಕಾರ್ಯದರ್ಶಿಗಳು

**ಕಡಪ. ರಾಘವೇಂದ್ರಾಚಾರ್ಯ**
ಪ್ರಾಂಶುಪಾಲರು





## ಮಂತ್ರಾಲಯ ಮಠ ಅನ್ನದಾನ ಮಾಡುವುದರಲ್ಲಿ ಮುಂದು

**- ಆಂಧ್ರ ಎಂಡೋಮೆಂಟ್ ಕಮಿಷನರ್**

ಮಂತ್ರಾಲಯದ ಶ್ರೀರಾಘವೇಂದ್ರಸ್ವಾಮಿಗಳವರ ಮಠವು ಇಡೀ ರಾಜ್ಯದಲ್ಲೇ (ಆಂಧ್ರಪ್ರದೇಶ) ಅನ್ನದಾನ ಮಾಡುವುದರಲ್ಲಿ ಮುಂದಿದೆ ಎಂದು ಆಂಧ್ರ ಮುಜರಾಯಿ ಇಲಾಖೆಯ ಆಯುಕ್ತರಾದ ಶ್ರೀಸುಂದರಕುಮಾರ್ ರವರು ಹೇಳಿದರು. ಮಂತ್ರಾಲಯದಲ್ಲಿ ನಡೆದ ಮಹಾರಥೋತ್ಸವದ ಸಂದರ್ಭದಲ್ಲಿ ಭಕ್ತಜನತೆಯನ್ನುದ್ದೇಶಿಸಿ ಮಾತನಾಡುತ್ತಾ ಭಾರತದೇಶದಲ್ಲಿ ಆಧ್ಯಾತ್ಮಿಕ ಪುಣ್ಯಭೂಮಿಯಾಗಿ ಮಂತ್ರಾಲಯದ ಭೂಮಿ ಅತ್ಯಂತ ಪವಿತ್ರವಾದುದೆಂದು ಹೇಳಿ ವೇದಮಂತ್ರಗಳ ಘೋಷದಿಂದ ಬೆಳಗುತ್ತಿರುವ ಮಂತ್ರಾಲಯವನ್ನು ಇಂದಿನ ಪೀಠಾಧಿಪತಿಗಳಾದ ಶ್ರೀಸುಶಮೀಂದ್ರತೀರ್ಥರು ಅಭಿವೃದ್ಧಿಪಡಿಸುತ್ತಿರುವ ವಿಧಾನವನ್ನು ಮುಕ್ತಕಂಠದಿಂದ ಶ್ಲಾಘಿಸಿದರು. ದಿನೇ ದಿನೇ ಹೆಚ್ಚಾಗಿ ಬರುತ್ತಿರುವ ಭಕ್ತರಿಗೆ ಇಲ್ಲಿನ ಅನ್ನದಾನವು ಒಂದು ವರವಾಗಿ ಪರಿಣಮಿಸಿದೆ ಮತ್ತು ಸಂಸ್ಕೃತ ವಿದ್ಯಾಪೀಠ, ವೈದ್ಯಸೇವೆ, ವಿದ್ಯಾಕೇಂದ್ರಗಳ ವ್ಯವಸ್ಥೆ ಚೆನ್ನಾಗಿರುವುದಾಗಿ ಮೆಚ್ಚುಗೆ ವ್ಯಕ್ತಪಡಿಸಿ ಆರೋಗ್ಯದಾನ (ವೈದ್ಯಸೇವೆ) ಮಾಡುವುದಕ್ಕಾಗಿ ಈಗಿರುವುದಕ್ಕಿಂತಲೂ ಇನ್ನೂ ಹೆಚ್ಚಿನ ಸಿದ್ಧತೆ ಮಾಡಬೇಕೆಂದು ತಿಳಿಸಿದರು.

## ಅಖಿಲ ಕರ್ನಾಟಕ ತ್ರಿಮತಸ್ಥ ಬ್ರಾಹ್ಮಣರ ವಧೂ-ವರರ ಕಲ್ಯಾಣ ಮಾಹಿತಿ ಕೇಂದ್ರ

ಇದರ ವತಿಯಿಂದ ವಧೂ-ವರರ ಮುಖಾಮುಖಿ ಸಮಾವೇಶವನ್ನು ಹಮ್ಮಿಕೊಳ್ಳಲಾಗಿದೆ. ಭಾಗವಹಿಸಲಿಚ್ಛಿಸುವ ಮಾತಾ-ಪಿತೃಗಳು ತಮ್ಮ ವಧೂ-ವರರ 2 ಭಾವಚಿತ್ರ, 2 ಜಾತಕ ಪ್ರತಿಗಳನ್ನು ಸ್ವ-ವಿಳಾಸವಿರುವ ಅಂಚೆ ಚೀಟಿ ರೂ. 5/- ಹೊಂದಿರುವ 2 ಕವರಿನೊಂದಿಗೆ ಕಳುಹಿಸುವುದು.

ಸ್ಥಳ :

**ರಾಯ ರಾಯ ಕೊಲಂ ವೆಂಕಟರಾವ್ ಕಲ್ಯಾಣಮಂಟಪ**

ಪಂಪಮಹಾಕವಿ ರಸ್ತೆ, ಶಂಕರಪುರಂ, ಬೆಂಗಳೂರು - 560 004

**ಸಮಾವೇಶ ನಡೆಯುವ ದಿನಾಂಕ 28-10-2007 ಭಾನುವಾರ**

**ಭರ್ತಿಮಾಡಿದ ಅರ್ಜಿಗಳನ್ನು ಕಳುಹಿಸಲು ಕೊನೆಯ ದಿನಾಂಕ 23-10-2007, ಭಾನುವಾರ, ವೇಳೆ : ಬೆಳಗ್ಗೆ 9.00 ರಿಂದ ಸಂಜೆ 5.00 ರವರೆಗೆ**

ಅರ್ಜಿ ಮತ್ತು ನೊಂದಣಿಗಾಗಿ ಸಂಪರ್ಕಿಸಿ

**ಎಚ್.ಎಸ್. ವೆಂಕಟೇಶ್ ರಾವ್,** ಸಂಘಟನಾಕಾರರು

**ದೂರವಾಣಿ : 26727119, ಮೊಬೈಲ್ : 99453-53228**

ಲೇಖನಾಂಕ

# ಶ್ರೀರಾಯರ ಯಾಜ್ಞೀಯೋಪನಿಷತ್ ಖಂಡಾರ್ಥದ ವೈಶಿಷ್ಟ್ಯ

■ ಶ್ರೀ ಮಾಧವಾಚಾರ್ಯ
ನಂ. ೩೭೨, ೨ನೇ ಮುಖ್ಯರಸ್ತೆ, ೭ನೇ ಅಡ್ಡರಸ್ತೆ, ಶ್ರೀನಿವಾಸನಗರ, ಬೆಂಗಳೂರು

'ನಾನ್ಯಃ ಪಂಥಾ ಅಯನಾಯ ವಿದ್ಯತೇ' ಎಂಬ ಶೃತಿಯು ಜ್ಞಾನದಿಂದಲೇ ಮೋಕ್ಷವೆಂದು ಹೇಳುತ್ತಿದೆ. ಆದರೆ ಸಂಪಾದಿತವಾದ ಜ್ಞಾನವು ಪರಿಶುದ್ಧವಾದರೆ ಮಾತ್ರ ಇದು ಸಾಧ್ಯ. ಇಂತಹ ಶುದ್ಧವಾದ ಬ್ರಹ್ಮಜ್ಞಾನವನ್ನು ದೊರಕಿಸಿಕೊಡಲು ಅನೇಕ ದಾರ್ಶನಿಕರು ಹೊರಟಿದ್ದರೂ ಅವರೆಲ್ಲರೂ ಶೃತಿ, ಸ್ಮೃತಿಗಳ ವ್ಯಾಖ್ಯಾನ ಮಾಡುವಲ್ಲಿ ಎಡವಿ ಬ್ರಹ್ಮಜ್ಞಾನೋಪಾಯವನ್ನು ದೊರಕಿಸಿಕೊಡಲು ವಿಫಲ-ರಾಗಿದ್ದಾರೆ.

ಈ ನಿಟ್ಟಿನಲ್ಲಿ ನಾವು ಅವಮರ್ಶಿಸಿದಾಗ ಒಂದು ಆಶಾಕಿರಣ ದ್ವೈತವೇದಾಂತ ದರ್ಶನ. ಈ ದರ್ಶನದ ಪ್ರವರ್ತಕರಾದ ಶ್ರೀಮಧ್ವಾಚಾರ್ಯರು ಇವರ ಪೂರ್ವ-ದಲ್ಲಿದ್ದ ೨೧ ದರ್ಶನಗಳನ್ನು ವಿಮರ್ಶಿಸಿ ಶೃತಿ, ಸ್ಮೃತಿ ಪ್ರಮಾಣಗಳ ಬೆಂಬಲ ಪಡೆದ, ಅನುಭವಕ್ಕೂ ಹತ್ತಿರವಾದ, ಶ್ರೀವೇದವ್ಯಾಸರಿಗೆ ಸಮ್ಮತವಾದ ಬ್ರಹ್ಮಜ್ಞಾನವನ್ನು ಪಡೆಯಲು ಸೋಪಾನದಂತೆ ಇರುವ ಶಾಸ್ತ್ರಕೃತಿಗಳನ್ನು ರಚಿಸಿದ್ದಾರೆ.

ಶ್ರೀಆಚಾರ್ಯರು ಶ್ರೀವೇದವ್ಯಾಸರ ಬ್ರಹ್ಮಸೂತ್ರಗಳಿಗೆ ಭಾಷ್ಯ ರಚಿಸಿದ್ದಷ್ಟೇ ಅಲ್ಲದೇ ಸೂತ್ರಗಳ ಅಭಿಪ್ರಾಯವನ್ನನುಸರಿಸಿ ವೇದಗಳೆಂಬ ಪುಷ್ಪಗಳ ಸಾರವಾದ ಹೆಜ್ಜೇನಿನಂತಿರುವ ಉಪನಿಷತ್ತುಗಳಿಗೂ ಭಾಷ್ಯವನ್ನು ರಚಿಸಿದ್ದಾರೆ.

ಆದರೆ ಶ್ರೀಆಚಾರ್ಯರ ಭಾಷ್ಯವು 'ಬಾಲಸಂಘಮಪಿ ಬೋಧಯತ್ ಭೃಶಂ ದುರ್ನಿರೂಪವಚನಂ ಚ ಪಂಡಿತೈಃ' ಎಂಬ ನಾರಾಯಣಪಂಡಿತಾಚಾರ್ಯರ ಮಾತಿನಂತೆ ಬಹಳ ಕ್ಲಿಷ್ಟವಾದದ್ದಾಗಿದೆ. ಕ್ಲಿಷ್ಟವಾದ ಭಾಷ್ಯವೆಂಬ ಮೊಗ್ಗನ್ನು ವಿಕಾಸಗೊಳಿಸು-ವುದರಲ್ಲಿ ಶ್ರೀಜಯತೀರ್ಥರು ಅಗ್ರಗಣ್ಯರಾಗಿದ್ದಾರೆ. ಇವರು ತಮ್ಮ ಟೀಕಾಗಳಲ್ಲಿ ಭಾಷ್ಯದ ಒಂದೊಂದು ಪದಾಕ್ಷರಗಳನ್ನೂ ವಿಸ್ತಾರವಾಗಿ ವ್ಯಾಖ್ಯಾನಿಸುತ್ತಾ ಭಾಷ್ಯದ ಮಹತ್ತ್ವ ಹಾಗೂ ಗಾಂಭೀರ್ಯವನ್ನು ಜಗತ್ತಿಗೆ ಎತ್ತಿತೋರಿಸಿದ್ದಾರೆ.

ಕರ್ನಾಟಕ ಸಿಂಹಾಸನಾಧೀಶ್ವರರಾದ ಶ್ರೀವ್ಯಾಸರಾಜರು ಆಚಾರ್ಯರ ಬ್ರಹ್ಮಸೂತ್ರ ಭಾಷ್ಯಕ್ಕೆ ವ್ಯಾಖ್ಯಾನವಾದ ಶ್ರೀಜಯತೀರ್ಥರ ತತ್ತ್ವಪ್ರಕಾಶಿಕಾ ಎಂಬ ನೈದಿಲೆಗೆ





ಚಂದ್ರನಂತೆ ಇರುವ ತಾತ್ಪರ್ಯಚಂದ್ರಿಕಾ ಎಂಬ ವ್ಯಾಖ್ಯಾನವನ್ನು ರಚಿಸುವುದರ ಜೊತೆಗೆ ತರ್ಕತಾಂಡವ, ನ್ಯಾಯಾಮೃತಾದಿ ಉದ್ಗ್ರಂಥಗಳನ್ನು ರಚಿಸುವ ಮೂಲಕ ಅನೇಕ ದರ್ಶನಗಳನ್ನು ವಿಮರ್ಶಿಸಿ, ದಾರ್ಶನಿಕರಲ್ಲಿ ಶ್ರೀಮಧ್ವಾಚಾರ್ಯರ ವೈಶಿಷ್ಟ್ಯ-ವನ್ನು ಪ್ರಕಾಶಪಡಿಸಿ ಮೋಕ್ಷಾಕಾಂಕ್ಷಿಗಳಿಗೆ ಬ್ರಹ್ಮಜ್ಞಾನದ ಹಾದಿಯನ್ನು ಸುಗಮ-ಗೊಳಿಸಿದ್ದಾರೆ.

ಆದ್ದರಿಂದಲೇ-

**ಶ್ರೀಮಧ್ವಃ ಕಲ್ಪವೃಕ್ಷಸ್ತು ಜಯಾರ್ಯಾಃ ಕಾಮಧೇನವಃ ।**
**ಚಿಂತಾಮಣಿಸ್ತು ವ್ಯಾಸಾರ್ಯಃ ಮುನಿತ್ರಯಮುದಾಹೃತಮ್ ॥**

ಎಂಬ ಶ್ಲೋಕದ ಮೂಲಕ ಮಧ್ವಸಮಾಜವು ''ಶ್ರೀಮಧ್ವರು ಕಲ್ಪವೃಕ್ಷದಂತೆ, ಶ್ರೀಜಯತೀರ್ಥರು ಕಾಮಧೇನುವಿನಂತೆ, ಶ್ರೀವ್ಯಾಸರಾಜರು ಚಿಂತಾಮಣಿಯಂತೆ'' ಎಂದು ಮುನಿತ್ರಯರನ್ನು ಗೌರವದಿಂದ ಸ್ಮರಿಸಿದೆ. ಅವರ ಗ್ರಂಥಾಧ್ಯಯನದಿಂದ ಈ ಸತ್ಯವು ನಮಗೆ ಮನವರಿಕೆಯಾಗುವುದು.

ಉಪನಿಷತ್ ಎಂದರೆ ಪರಮಾತ್ಮನನ್ನು ಹೊಂದಲು ಸಾಧನವಾದ ವಿದ್ಯೆ ಅಥವಾ ಬ್ರಹ್ಮಜ್ಞಾನವನ್ನು ಕೊಡುವ ವಿದ್ಯೆ ಎನ್ನಬಹುದು. ಉಪನಿಷತ್ತುಗಳು ಅನೇಕ-ವಿದ್ದರೂ ಪ್ರಧಾನವಾಗಿ 'ಈಶ, ತಲವಕಾರಕ, ಕಾಠಕ, ಪ್ರಶ್ನ, ಮಾಂಡೂಕ, ಮುಡಂಕ, ತೈತ್ತರೀಯ, ಐತರೇಯ, ಛಾಂದೋಗ್ಯ, ಬೃಹದಾರಣ್ಯಕ'ಗಳೆಂದು 'ಹತ್ತು' ಉಪನಿಷತ್ತು-ಗಳನ್ನು ಹೆಸರಿಸಲಾಗುತ್ತದೆ.

ಯಾವುದೇ ದಾರ್ಶನಿಕ ವಿಚಾರವನ್ನು ವಿಮರ್ಶಿಸಬೇಕಾದರೂ ಉಪನಿಷತ್ತಿನ ಸಹಾಯ ಅತ್ಯಾವಶ್ಯಕ. ಆದ್ದರಿಂದಲೇ ಉಪನಿಷತ್ತುಗಳಿಗೆ ಶ್ರೀಮಧ್ವಾಚಾರ್ಯರ ಭಾಷ್ಯ ಹಾಗೂ ಶ್ರೀಜಯತೀರ್ಥರ ಟಿಪ್ಪಣಿಗಳನ್ನು ನಾವು ಕಾಣಬಹುದು.

## ಶ್ರೀರಾಘವೇಂದ್ರರು

ಶ್ರೀಜಯತೀರ್ಥರ ಟೀಕೆಯು ಅತ್ಯಂತ ಪ್ರೌಢವಾದದ್ದರಿಂದ ಕಾಲಕ್ರಮೇಣ ಕಲುಷಿತ ಮನಸ್ಕರಾದ ಜೀವಿಗಳಿಗೆ ಶ್ರದ್ಧೆಯ ಅಭಾವದಿಂದಲೂ, ಟೀಕಾದ ಗಾಂಭೀರ್ಯವನ್ನು ಅರ್ಥೈಸಿಕೊಳ್ಳುವುದರಲ್ಲಿ ಹಿಮ್ಮುಖರಾದ ಜನರಿಗೂ ತಮ್ಮ ತುಂಬು ಕಾರುಣ್ಯದಿಂದ ಶ್ರೀರಾಘವೇಂದ್ರಯತಿಗಳು ಉಪನಿಷತ್ತುಗಳಿಗೆ ಖಂಡಾರ್ಥ-ವನ್ನು ರಚಿಸಿ ಮಹದುಪಕಾರವನ್ನು ಮಾಡಿದ್ದಾರೆ. ಉಪನಿಷತ್ತುಗಳ ಭಾಷ್ಯ -

ಟೀಕೆಗಳಿಗೆ ಅನೇಕ ವ್ಯಾಖ್ಯಾನಗಳು ರಚಿತವಾಗಿದ್ದರೂ ಶ್ರೀರಾಯರ ಖಂಡಾರ್ಥವು ವೈಶಿಷ್ಟ್ಯವನ್ನು ಪಡೆದಿದೆ.

ಖಂಡಾರ್ಥದಲ್ಲಿ ಶ್ರೀರಾಯರು ಶ್ರೀಮದಾಚಾರ್ಯರ ಭಾಷ್ಯ ಹಾಗೂ ಜಯತೀರ್ಥರ ಟೀಕಾ ಇವುಗಳ ಅಭಿಪ್ರಾಯಕ್ಕನುಗುಣವಾಗಿ ಉಪನಿಷತ್ತಿನ ಪದಗಳಿಗೆ ಸುಂದರ ಹಾಗೂ ಚೊಕ್ಕವಾಗಿ ಅರ್ಥವನ್ನು ಹೇಳುತ್ತಾರೆ. ಅಲ್ಲಲ್ಲಿ ವ್ಯಾಕರಣಸೂತ್ರಗಳನ್ನು ಹೇಳಿ ಪದಗಳ ನಿಷ್ಪತ್ತಿಯನ್ನೂ ಸೂಚಿಸುತ್ತಾರೆ. ಪದಾರ್ಥವನ್ನು ವಿವರಿಸುವಾಗ ವಿಗ್ರಹವನ್ನು ತೋರಿಸುವ ಮೂಲಕ ಶಬ್ದಗಳನ್ನು ಒಡೆದು ಕೊನೆಗೆ ಸಮಗ್ರವಾಗಿ ಅರ್ಥವನ್ನು ಹೇಳುವುದರ ಜೊತೆಗೆ ಮಂದಮತಿಗಳಿಗೂ ಆ ಅರ್ಥವನ್ನು ಸುಲಭವಾಗಿ ತಿಳಿಸಿರುವುದನ್ನು ನಾವು ಕಾಣುತ್ತೇವೆ. ಹೀಗೆ ಅನೇಕ ವಿಧದ ವೈಶಿಷ್ಟ್ಯವನ್ನು ನೋಡ-ಬಹುದು.

ಪ್ರಕೃತ, ಈ ಲೇಖನದಲ್ಲಿ ಈಶಾವಾಸ್ಯೋಪನಿಷತ್ತಿನ ಖಂಡಾರ್ಥದಲ್ಲಿನ ಕೆಲವು ಉದಾಹರಣೆಗಳನ್ನು ನೀಡಿ ರಾಯರ ವೈಶಿಷ್ಟ್ಯವನ್ನು ನಿರೂಪಿಸುವ ಪ್ರಯತ್ನವಿದೆ.

ಈಶಾವಾಸ್ಯೋಪನಿಷತ್ತಿನ ಖಂಡಾರ್ಥದಲ್ಲಿ ಶ್ರೀರಾಘವೇಂದ್ರತೀರ್ಥರ ಅಪೂರ್ವ ಕೌಶಲವನ್ನು ಹೀಗೆ ಕಾಣಬಹುದು –

೧) ಮಂತ್ರಾರ್ಥವನ್ನು ವಿವೇಚಿಸುವಾಗ ಭಾಷ್ಯ, ಟೀಕೆಗಳಿಂದ ಉಕ್ತ ಪ್ರಮೇಯ-ಗಳನ್ನು ಬ್ರಹ್ಮಸೂತ್ರಗಳ ಅಡಿಯಲ್ಲಿ ಪುಷ್ಟೀಕರಿಸುತ್ತಾರೆ. ಉದಾ :

**“ಕುರ್ವನ್ನೇವೇಹ ಕರ್ಮಾಣಿ............ ನ ಕರ್ಮ ಲಿಪ್ಯತೇ ನರೇ”** (ಮಂತ್ರ 2)

‘‘ಮೋಕ್ಷವನ್ನು ಪಡೆಯಲು ಜ್ಞಾನವು ಅತ್ಯಾವಶ್ಯಕ. ಜ್ಞಾನವನ್ನು ಪಡೆಯ-ಲಿಚ್ಛಿಸುವ ಪ್ರತಿಯೊಬ್ಬ ಜೀವಿಯು ಕರ್ಮಗಳನ್ನು ಮಾಡುತ್ತಲೇ ನೂರು ವರ್ಷ (ಆಮರಣಾಂತ) ಜೀವಿಸಲು ಇಚ್ಛಿಸಬೇಕು. ಫಲಾಪೇಕ್ಷೆ ಇಲ್ಲದ ಭಗವತ್ಪೂಜಾ-ರೂಪವಾಗಿ ಮಾಡುವ ಕರ್ಮಗಳು ನಮಗೆ ತಾರಕ. ಇಂತಹ ಕರ್ಮಗಳಿಂದ ಅಂತಃಕರಣವು ಶುದ್ಧವಾಗಿ ಜ್ಞಾನವನ್ನು ಪಡೆಯಲು ಸಾಧ್ಯವಾಗುತ್ತದೆ. ಒಂದು ವೇಳೆ ತನ್ನ ವರ್ಣಾಶ್ರಮಗಳಿಗೆ ವಿಹಿತವಾದ ಕರ್ಮವನ್ನು ತೊರೆದರೆ ಅಂತಹ ಜೀವಿಯು ಪಾಪಕರ್ಮಗಳಿಂದ ಕೂಡಿ ಅಶುದ್ಧಚಿತ್ತನಾಗಿ ಜ್ಞಾನಕ್ಕೆ ಅಧಿಕಾರಿಯಾಗುವುದಿಲ್ಲ’’ ಎಂದು ಭಾವಾರ್ಥ.

ಭಾಷ್ಯದಲ್ಲಿ ಶ್ರೀಮದಾಚಾರ್ಯರು ‘‘ಜ್ಞಾನಿನೋಽಪಿ ಯತೋ ಹ್ರಾಸ ಆನಂದಸ್ಯ ಭವೇತ್ ಧ್ರುವಮ್’’ ಎಂದು ‘‘ಜ್ಞಾನಿಗಳೂ ಕೂಡ ಭಗವದುಪಾಸನಾರೂಪವಾದ ಕರ್ಮವನ್ನು ಮಾಡಲೇಬೇಕು’’ ಎಂದು ಆದೇಶಿಸಿದ್ದಾರೆ. ವಿಹಿತಕರ್ಮವನ್ನು ಮಾಡದ





ಜ್ಞಾನಿಯೂ ಕೂಡ ಮೋಕ್ಷದಲ್ಲಿ ಆನಂದಹ್ರಾಸವನ್ನು ಹೊಂದುವೆನೆಂದು ಜ್ಞಾನಿಗೂ ಹಾಗೂ ಅಲ್ಪಾಧಿಕಾರಿಗೂ ಕರ್ಮಾನುಷ್ಠಾನವನ್ನು ಸಮರ್ಥಿಸಿದ್ದಾರೆ.

ಇಲ್ಲಿ ಶ್ರೀರಾಘವೇಂದ್ರತೀರ್ಥರು – ‘‘ಅಜ್ಞಾನಿಯಂತೆ ಜ್ಞಾನಿಯೂ ಕರ್ಮವನ್ನು ಮಾಡಲೇಬೇಕು’’ ಎಂಬ ಭಾಷ್ಯದ ಉಕ್ತಿಯನ್ನು ಶ್ರೀವೇದವ್ಯಾಸರಿಂದ ರಚಿತವಾದ ‘‘ನಿಯಮಾಚ್ಚ’’ (೩-೪-೭) ಎಂಬ ಬ್ರಹ್ಮಸೂತ್ರವನ್ನು ಸಂವಾದಿಯಾಗಿ ಉದಾಹರಿಸಿ, ಸೂತ್ರದಲ್ಲಿ ಹೇಳಿದಂತೆ ಅಪರೋಕ್ಷಜ್ಞಾನಿಯೂ ಕರ್ಮವನ್ನು ಮಾಡದಿದ್ದರೆ ಮುಕ್ತಿ-ಯಲ್ಲಿ ಆನಂದಹ್ರಾಸರೂಪವಾದ ಪಾಪಕರ್ಮಲೇಪವು ಇದೆಯೆಂದು ಶ್ರೀಮದಾಚಾರ್ಯರು ಜ್ಞಾನಿಪರವಾಗಿಯೂ ವ್ಯಾಖ್ಯಾನಿಸಿದ್ದಾರೆ ಎಂದು ಭಾಷ್ಯ ಹಾಗೂ ಸೂತ್ರಗಳಿಗೆ ವ್ಯಾಖ್ಯಾನ ವ್ಯಾಖ್ಯೇಯ ಭಾವವನ್ನು ತೋರಿಸಿಕೊಡುತ್ತಾರೆ. ಇದರಿಂದ ಅಲ್ಪಾಧಿಕಾರಿಯು ಮಾತ್ರ ಕರ್ಮವನ್ನು ಮಾಡಬೇಕೇ ಹೊರತು ಜ್ಞಾನಿಗಳಲ್ಲ ಎಂಬ ಇತರ ಮತದ ಅಭಿಪ್ರಾಯವು ಶ್ರೀರಾಯರು ಉದಾಹರಿಸಿದ ‘ನಿಯಮಾಚ್ಚ’ ಎಂಬ ಸೂತ್ರದಿಂದ ಜ್ಞಾನಿಪರವಾಗಿಯೂ ಹೇಳಿದ್ದರಿಂದ ನಿರಾಕೃತವಾಯಿತು.

೨) ಖಂಡಾರ್ಥದಲ್ಲಿ ಶ್ರೀರಾಯರು ಹೇಳಿರುವ ಪದಾರ್ಥವು ಬಹಳ ಅರ್ಥವತ್ತಾಗಿಯೂ ಸಂಶಯವನ್ನು ನಿವಾರಿಸುವುದಾಗಿಯೂ ಕಂಡುಬರುವುದು. ಉದಾ :

**“ಅನೇಜದೇಕಂ.......... ತಸ್ಮಿನ್ನಪೋ ಮಾತರಿಶ್ವಾ ದಧಾತಿ”** (ಮಂತ್ರ 4)

‘‘ಪರಮಾತ್ಮನು ನಿರ್ಭಯನು, ಶ್ರೇಷ್ಠನು, ಮನೋವೇಗಕ್ಕಿಂತ ವೇಗದವನೂ ಆಗಿದ್ದಾನೆ. ಇಂತಹ ಹರಿಯ ಸ್ವರೂಪವನ್ನು ದೇವತೆಗಳೂ ಸಂಪೂರ್ಣವಾಗಿ ತಿಳಿಯಲಾರರು. ಇವನು ನಿಂತಲ್ಲೇ ಓಡುತ್ತಿರುವವರನ್ನು ಅತಿಕ್ರಮಿಸಿ ಇರುತ್ತಾನೆ. (ಅಚಿಂತ್ಯನು ಹಾಗೂ ಸರ್ವಗತನಾದ್ದರಿಂದ) ಇಂತಹ ಪರಮಾತ್ಮನಲ್ಲಿ ಶ್ರೀಮುಖ್ಯಪ್ರಾಣರು ಜೀವರು ಮಾಡಿದ ಕರ್ಮಗಳನ್ನು ಸ್ವಪ್ರೇರಣೆಯಿಂದಲೇ ಸಮರ್ಪಿಸುತ್ತಾರೆ’’ ಎಂದು ಮಂತ್ರಾರ್ಥ.

ಇಲ್ಲಿ ಒಂದು ಸಂಶಯ – ಕರ್ಮಗಳೆಂದರೆ ಪಾಪಕರ್ಮಗಳೂ ಹೌದು. ಪುಣ್ಯಕರ್ಮದ ಜೊತೆಗೆ ಜೀವಿಯು ಮಾಡಿದ ಪಾಪಕರ್ಮಗಳನ್ನೂ ಶ್ರೀಪ್ರಾಣರು ಸಮರ್ಪಿಸುತ್ತಾರೋ? ಎಂದು. ಇಲ್ಲಿ ಶ್ರೀರಾಯರು–‘‘ಅಪಃ ಕರ್ಮಾಣಿ, ಸ್ವಪ್ರೇರಣಯಾ ಪ್ರಾಣಿಭಿಃ ಕ್ರಿಯಮಾಣಾನಿ ಪುಣ್ಯಕರ್ಮಾಣಿ ದಧಾತಿ ಸಮರ್ಪಯತೀತಿ’’ ಎಂದು. ‘‘ಕರ್ಮವೆಂದರೆ ಪುಣ್ಯಕರ್ಮಗಳೆಂದು ವ್ಯಾಖ್ಯಾನಿಸಿ ಜೀವಿಯು ಮಾಡಿದ ಪುಣ್ಯಕರ್ಮ-ಗಳನ್ನು ಮಾತ್ರ ಸಮರ್ಪಿಸುತ್ತಾರೆ’’ ಎನ್ನುತ್ತಾರೆ. ಇದರಿಂದ ಇತರ ಗ್ರಂಥಗಳ

ವಿರೋಧ ಪರಿಹೃತವಾದಂತಾಗಿ ಇವರ ಪದಾರ್ಥ ವ್ಯಾಪ್ತಿಯೂ, ಅರ್ಥವತ್ತತೆಯೂ ದ್ಯೋತವಾಗುವುದು.

೩. ಶ್ರುತ್ಯರ್ಥವನ್ನು ವಿವರಿಸುವಾಗ ಸಂದರ್ಭೋಚಿತ ಇತರ ಮತಗಳ ಅಭಿಪ್ರಾಯವನ್ನು ಬಹಳ ಸೌಮ್ಯವಾಗಿ ನಿರಾಕರಿಸುತ್ತಾರೆ. ಉದಾ :

**"ಸ ಪರ್ಯಗಾತ್.......... ಯಾಥಾತಥ್ಯತೋಽರ್ಥಾನ್ ವ್ಯದಧಾಚ್ಛಾಶ್ವತೀಭ್ಯಃ ಸಮಾಭ್ಯಃ"**

(ಮಂತ್ರ 8)

''ಶೋಕರಹಿತನು, ಲಿಂಗದೇಹರಹಿತನು, ಪೂರ್ಣನು, ಪಾಪಮೂಲವಾದ ಸ್ಥೂಲ - ಸೂಕ್ಷ್ಮದೇಹಹೀನನು, ಪ್ರಕೃತ್ಯಾದಿಗಳಿಗೆ ಒಡೆಯನು, ಜ್ಞಾನಾನಂದಾದಿ ದೇಹವುಳ್ಳವನು, ಎಲ್ಲರಿಗಿಂತ ಶ್ರೇಷ್ಠನು, ಅನ್ಯಾಶ್ರಯರಹಿತನೂ ಆದ ಪರಮಾತ್ಮನು ಅನಾದ್ಯನಂತಕಾಲದಿಂದಲೂ ಸತ್ಯವಾಗಿಯೇ ಇರುವ ಜಗತ್ತನ್ನು ಸೃಷ್ಟಿಸಿದನು'' ಎಂದು ಖಂಡಾರ್ಥದ ಭಾವ.

ಇಲ್ಲಿ ಶ್ರೀರಾಯರು ಅದ್ವೈತ ಹಾಗೂ ತಾರ್ಕಿಕ ಮತಾಭಿಪ್ರಾಯಗಳನ್ನು ''ಯಾಥಾತಥ್ಯತೋಽರ್ಥಾನ್........ಸಮಾಭ್ಯಃ'' ಎಂಬ ವಾಕ್ಯದಿಂದಲೇ ನಿರಾಕೃತವಾಯಿತು ಎನ್ನುತ್ತಾರೆ -

ಈ ಜಗತ್ತೆಲ್ಲವೂ ಬ್ರಹ್ಮನಲ್ಲಿ ಆರೋಪಿತವಾಗಿದೆ. ಆದ್ದರಿಂದ ಇಂಥಹಾ ಜಗತ್ತಿನ ಸೃಷ್ಟಿಗೆ ದೇಹದ ಅಪೇಕ್ಷೆಯು ಪರಮಾತ್ಮನಿಗೆ ಇಲ್ಲವೆಂದು ಅದ್ವೈತಿಗಳ ಅಭಿಪ್ರಾಯ. ಆದರೆ ಈ ಶೃತಿಯು ''ಸತ್ಯವಾದ ಜಗತ್ತನ್ನು ಸೃಷ್ಟಿಸಿದ'' ಎನ್ನುತ್ತಿದೆ. ಆದ್ದರಿಂದ ಸತ್ಯವಾದ ಈ ಜಗತ್ತಿನ ಸೃಷ್ಟಿಗೆ ದೇಹದ ಅಪೇಕ್ಷೆಯಿದೆಯೆಂದು ಸಂದೇಶಿಸುವ ಮೂಲಕ ಉಪನಿಷತ್ತು ಅದ್ವೈತವಾದವನ್ನು ನಿರಾಕರಿಸಿದೆ.

ತಾರ್ಕಿಕರು ಪರಮಾತ್ಮನಿಗೆ ಸದಾ ದೇಹವಿಲ್ಲದಿದ್ದರೂ ಸೃಷ್ಟಿಯ ಸಮಯದಲ್ಲಿ ದೇಹವು ಇದೆಯೆಂದು ಹೇಳುತ್ತಾರೆ. ಶ್ರೀರಾಯರು ಈ ವಾದವು ''ಶಾಶ್ವತೀಭ್ಯಃ ಸಮಾಭ್ಯಃ'' ಎಂಬ ವಾಕ್ಯದಿಂದ ನಿರಾಕೃತವಾಯಿತು ಎಂದು ತೋರಿಸುತ್ತಾರೆ - ''ಅನಾದಿ ಅನಂತಕಾಲದಿಂದಲೂ ಪ್ರವಾಹರೂಪವಾದ ಈ ಜಗತ್ತಿನ ಸೃಷ್ಟಿ ಇದೆ'' ಎಂದು ಉಪನಿಷತ್ತು ತಿಳಿಸುತ್ತಿದೆ. ಈ ಹಿನ್ನೆಲೆಯಲ್ಲಿ ಎಲ್ಲ ಕಾಲದಲ್ಲೂ ಸೃಷ್ಟಿ ಇರುವುದರಿಂದ ಅದಕ್ಕೆ ಶರೀರವುಳ್ಳ ಪರಮಾತ್ಮನ ಒಡಂಬಡಿಕೆ ಅನಿವಾರ್ಯವಿದೆ. ಹೀಗೆ ಸೃಷ್ಟಿಯ ಆರಂಭದಲ್ಲಿ ಮಾತ್ರವೇ ಪರಮಾತ್ಮನ ಶರೀರವನ್ನು ಒಪ್ಪುವ ತಾರ್ಕಿಕರ ಚಿಂತನೆ ಅಸಮರ್ಪಕವೆಂದು ಉಪನಿಷತ್ತಿನ ವ್ಯಾಖ್ಯಾನದಲ್ಲಿ ರಾಯರು ಎತ್ತಿತೋರಿಸಿದ್ದಾರೆ.





ಹೀಗೆ ನಾವು ಶ್ರೀರಾಘವೇಂದ್ರರ ವ್ಯಾಖ್ಯಾನಗಳ ಹಿರಿಮೆಯನ್ನು ಕಾಣಬೇಕಾದರೆ ಅವರ ಗ್ರಂಥಗಳ ಪಠನ-ಪಾಠನಾದಿಗಳಿಂದ ಮಾತ್ರ ಸಾಧ್ಯ ಮತ್ತು ಇದು ನಮ್ಮ ಕರ್ತವ್ಯವೂ ಹೌದು. ಈ ನಿಟ್ಟಿನಲ್ಲಿ ಕರ್ತವ್ಯನಿಷ್ಠರಾಗುವ ಮೂಲಕ ಶ್ರೀರಾಯರು ಹಾಗೂ ಅಂತರ್ಗತ ವಾಯು-ಹರಿಗಳನ್ನು ಸೇವಿಸಿ ಜ್ಞಾನಭಾಜರಾಗೋಣ.

❑❑

॥ ಶ್ರೀಮಲಕ್ಷ್ಮೀ ಅನಂತ ಪ್ರಸನ್ನ ॥

## ಶ್ರೀಅನಂತಪದ್ಮನಾಭ ಟೂರ್ಸ್ ಅಂಡ್ ಟ್ರಾವೆಲ್ಸ್

### ದಕ್ಷಿಣ ಭಾರತ (ಉಡುಪಿ ಪರ್ಯಾಯ, ರಾಮೇಶ್ವರ) ಯಾತ್ರೆ

ಪ್ರತಿನಿತ್ಯ ದೇವರ ಪೂಜೆ, ನೈವೇದ್ಯ, ತೀರ್ಥಪ್ರಸಾದ, ಮಡಿಯಿಂದ ಊಟದ ವ್ಯವಸ್ಥೆ ಇದೆ.

**ದಿನಾಂಕ 30-12-2007 ರಿಂದ 19-01-2008 ರವರೆಗೆ**

**ಯಾತ್ರಾಸ್ಥಳಗಳು :**

ಶ್ರೀಶೈಲ, ಅಹೋಬಿಲ, ತಿರುಪತಿ, ಕಂಚಿ, ತಿರಕೋಯಿಲೂರು, ಚಿದಂಬರಂ, ಕುಂಭಕೋಣ, ತಂಜಾವೂರು, ದೊಡ್ಡ ಶ್ರೀರಂಗಂ, ಮಧುರೈ, ರಾಮೇಶ್ವರ, ಕನ್ಯಾಕುಮಾರಿ, ಸುಚಿಂದ್ರ, ತಿರುವನಂತಪುರಂ, ಗುರುವಾಯೂರು, ಉಡುಪಿ, ಪಾಜುಕಾಕ್ಷೇತ್ರ, ದುರ್ಗಾಬೆಟ್ಟ, ಗೋಕರ್ಣ, ಸ್ವಾದಿ, ಮಂತ್ರಾಲಯ ಇತ್ಯಾದಿ.

**ಸೀಟು ಒಂದಕ್ಕೆ ರೂ. 6,900/- ಮಾತ್ರ** (3 × 2 ಲಕ್ಸುರಿ ಬಸ್ಸಿನಲ್ಲಿ)

**ಸೀಟು ಒಂದಕ್ಕೆ ರೂ. 9,600/- ಮಾತ್ರ** (2 × 2 ಪುಷ್‌ಬ್ಯಾಕ್ ಡಿಲಕ್ಸ್ ಬಸ್ಸಿನಲ್ಲಿ)

ಈ ಸುದೀರ್ಘ ಪ್ರವಾಸದಲ್ಲಿ ಚಹಾ / ಕಾಫಿ, ಉಪಹಾರ, ವಸತಿ ಸೌಕರ್ಯ, ಬಸ್ಸು ಛಾರ್ಜುಗಳು ಸೇರಿವೆ.

ಇಂದೇ ಸೀಟು ಒಂದಕ್ಕೆ ರೂ. 3000/- ಕಳುಹಿಸಿ ನಿಮ್ಮ ಸೀಟು ರಿಜರ್ವ್ ಮಾಡಿಸಿಕೊಳ್ಳಿ.

**ಸೂಚನೆ** : 23-09-2007 ರಿಂದ 23 ದಿನಗಳ ಉತ್ತರ ಭಾರತ (ಬದರಿ) ಯಾತ್ರಾ ಪವಿತ್ರ ಪಕ್ಷಮಾಸದಲ್ಲಿ ಹೈದ್ರಾಬಾದ್ ರೈಲ್ವೆ ನಿಲ್ದಾಣದಿಂದ ಹೊರಡಲಿದೆ ಮತ್ತು ನವೆಂಬರ್ 2007 ರಲ್ಲಿ 12 ದಿನಗಳ ನೇಪಾಳ, ಕಾಶಿ ಯಾತ್ರಾ ಇದೆ.

ಹೆಚ್ಚಿನ ವಿವರಗಳಿಗೆ :

**D. Vijayeendracharya Kosgi**

S/o. D. Ananthapadmanathacharya, Flat, 102, Madhuchaitanya Aprts.,
Sai Delux Nagar, Moulali, Hyderabad - 500 040

**Ph : 040-27141716, Cell : 9440702447**

## ಶ್ರೀಕೇಶವ ಫೌಂಡೇಷನ್ (ರಿ.)

ನಂ. 14, ಶ್ರೀಬನಶಂಕರಿ ನಿಲಯ, 7ನೇ ಅಡ್ಡರಸ್ತೆ, ಪ್ರಶಾಂತನಗರ, ಬೆಂಗಳೂರು - 560 079 ದೂರವಾಣಿ : 23289437

(Canara Bank, Vijayanagar, Bangalore - 40), S.B. A/c. No. 921784

**ಹಿಂದಿನ ಸಂಚಿಕೆ ಪುಟ 26 ರಿಂದ ಮುಂದುವರೆದ ಪ್ರಕಟಣೆ. ಹೆಸರಾಂತ ಪಂಡಿತರ ಜೊತೆ ಓದಿಕೊಳ್ಳಬೇಕೆಂದು ವಿನಂತಿ.**

ಶ್ರೀಜಾಲೀಹಾಳ ಕೇಶವಾಚಾರ್ಯರ ಮಾರ್ಗದರ್ಶನದಲ್ಲಿ ಸುಪುತ್ರ ಶ್ರೀವರದಾಚಾರ್ಯರು ಮತ್ತು ಮ। ಶಾ। ಸಂ। ಕಲ್ಯ ನರಸಿಂಹಮೂರ್ತ್ಯಾಚಾರ್ಯರು

**ಸೇವಾಭಾಗ್ಯ :** 5. ಈ ಫೌಂಡೇಷನ್ ಸದಸ್ಯತ್ವ ರೂ. 4,000-00 ಈ ರೀತಿಯ ಸದಸ್ಯರಿಗೆ ಶ್ರೀಮದ್ಭಾಗವತದ 24 ಸಂಪುಟಗಳನ್ನು ಕೊಡಲಾಗುವುದು. ಈ ಸದಸ್ಯತ್ವದ ಮೊಬಗಲಗನ್ನು ತಿಂಗಳಿಗೆ ರೂ. 100-00 ರಂತೆ 40 ತಿಂಗಳುಗಳಲ್ಲಿ ಪೂರೈಸಬಹುದು. ಪ್ರಕಾಶನದ ಕಾರ್ಯ (24 ಸಂಪುಟಗಳ) 40 ತಿಂಗಳುಗಳ ಮುಂಚೆಯೇ ಭಕ್ತರ ಸಹಕಾರದಿಂದ ಆಗುವುದಾದರೆ, ಈ ಸೇವಾಕರ್ತರು ಅಷ್ಟರ ಕಾಲದವರಿಗೆ ತಿಂಗಳ ಕಂತು ಸಲ್ಲಿಸಿದರೆ ಸಾಕು.

## ಮಂತ್ರಾಲಯದಲ್ಲಿ ಸಡಗರ – ಸಂಭ್ರಮ – ವೈಭವ
## ೩೩೬ ನೇ ಆರಾಧನಾ ಮಹೋತ್ಸವದ ವರದಿ

ಶ್ರೀರಾಯರು ಸಶರೀರರಾಗಿ ಬೃಂದಾವನ ಪ್ರವೇಶ ಮಾಡಿ ೩೩೬ ವರ್ಷಗಳು ಸಂದ ಸುಸಂದರ್ಭದ ಆಚರಣೆಯೇ ಶ್ರೀರಾಯರ ಆರಾಧನೆ. ಇಡೀ ವಿಶ್ವದಾದ್ಯಂತ ಅನೇಕ ಕಡೆಗಳಲ್ಲಿ ಲಕ್ಷಾಂತರ ಭಕ್ತರಿಗೆ ದರ್ಶನ ಹಾಗೂ ಅನ್ನದಾನ ನಡೆಯುವುದು ರಾಯರ ಆರಾಧನೆಯಲ್ಲಿ ಮಾತ್ರ. ರಾಯರು ತಮ್ಮ ಬೃಂದಾವನ ಪ್ರವೇಶಕ್ಕೆ ಆರಿಸಿಕೊಂಡ ಕ್ಷೇತ್ರವೇ ಮಂತ್ರಾಲಯ. ಮಂತ್ರಾಲಯದಲ್ಲಿ ಪ್ರತಿನಿತ್ಯವೂ ರಾಯರ ಆರಾಧನೆಯಂತೆ ಜನಸಾಗರ ಸೇರುವುದಾದರೆ ವಿಶೇಷವಾದ ರಾಯರ ಆರಾಧನೆಯ ದಿನಗಳಲ್ಲಿ ಜನತೆಯ ಮಹಾಪೂರವೇ ಹರಿದುಬರುತ್ತದೆ. ಆರಾಧನೆಯೆಂದಾಕ್ಷಣ ಇಡೀ ಮಂತ್ರಾಲಯವು ತನ್ನನ್ನು ಸಿಂಗರಿಸಿಕೊಂಡು ರಾಯರ ಆರಾಧನಾ ಕೈಂಕರ್ಯ-ಗಳಿಗೆ ಸಿದ್ಧವಾಗಿಬಿಡುತ್ತದೆ. ಮಂತ್ರಾಲಯದ ಧ್ವನಿವರ್ಧಕದಲ್ಲಂದು ''ಹಾರುತಿದೆ ಮೂಜಗದಿ ವಿಜಯದ ಪತಾಕೆ. ಪರಿಮಳಾಚಾರ್ಯರ ಕೀರುತಿಯ ಸಾರುತಲಿ'' ಎಂದು ಮೊಳಗುತ್ತಿದ್ದಂತೆ ಉಭಯ ಶ್ರೀಪಾದಂಗಳವರು ಮಂತ್ರಾಲಯದ ಮಹಾದ್ವಾರದಲ್ಲಿ ಭಗವದ್ಧ್ವಜವನ್ನು ಬಾನಂಗಳಕ್ಕೆ ಹಾರಿಸುವ ಮೂಲಕ ರಾಯರ ಆರಾಧನಾ ಸಪ್ತರಾತ್ರೋತ್ಸವಕ್ಕೆ ಚಾಲನೆ ನೀಡಿದರು.

ನಂತರದಲ್ಲಿ ಗಜಪೂಜಾ, ಗೋಪೂಜಾ, ಲಕ್ಷ್ಮೀಪೂಜಾ, ಧಾನ್ಯಪೂಜಾ ಇವುಗಳನ್ನು ನೆರವೇರಿಸಿ ಆರಾಧನೆಗಾಗಿ ಆಗಮಿಸುವ ಸಕಲ ಜನರಿಗೂ ಯಾವ ತೊಂದರೆಯೂ ಆಗದಂತೆ ನಿರ್ವಿಘ್ನವಾಗಿ ಆರಾಧನೆಯು ನೆರವೇರಲೆಂದು ಶ್ರೀರಾಯರಲ್ಲಿ ಸಂಕಲ್ಪ ಮಾಡುವುದು ಶ್ರೀಮಠದ ಸಂಪ್ರದಾಯ.

ಪ್ರತಿವರ್ಷ ಆರಾಧನಾ ಸಂದರ್ಭದಲ್ಲಿ ನೀಡಲ್ಪಡುವ 'ಶ್ರೀರಾಘವೇಂದ್ರಾನುಗ್ರಹ ಪ್ರಶಸ್ತಿ' ಪ್ರದಾನವು ಒಂದು ವಿಶೇಷ ಕಾರ್ಯಕ್ರಮವಾಗಿ ನೆರವೇರುವುದು. ಇದರೊಂದಿಗೆ 'ಆಸ್ಥಾನ ವಿದ್ವಾನ್' ಪಟ್ಟವನ್ನು ಕೂಡಾ ರಾಷ್ಟ್ರದ ಖ್ಯಾತ ಸಂಗೀತ ವಿದ್ವಾಂಸರುಗಳಿಗೆ ನೀಡುವುದೂ ಕೂಡಾ ಇತ್ತೀಚಿನ ದಿನಗಳಲ್ಲಿ ಸಂಪ್ರದಾಯವಾಗಿದೆ. ಏಳು ದಿನಗಳ ಕಾಲ ನಡೆದ ಈ ಸಪ್ತರಾತ್ರೋತ್ಸವದಲ್ಲಿ ಮಂತ್ರಾಲಯ ಕ್ಷೇತ್ರಕ್ಕೆ ಭೇಟಿಕೊಟ್ಟ ಜನಗಳ ಸಂಖ್ಯೆ ಸುಮಾರು ಐದು - ಆರು ಲಕ್ಷ ಎಂದು ಹೇಳಬಹುದು.





ಪ್ರತಿದಿನವು ಐವತ್ತರಿಂದ ಅರವತ್ತು ಸಾವಿರ ಜನರಿಗೆ ಭೋಜನದ ವ್ಯವಸ್ಥೆಯನ್ನು ಶ್ರೀಮಠವು ವ್ಯವಸ್ಥಿತವಾಗಿ ಮಾಡಿರುತ್ತದೆ.

ನಸುಕಿನಿಂದಲೇ ರಾಯರ ದರ್ಶನಕ್ಕಾಗಿ ಭಕ್ತರು ಸಾಲುಗಟ್ಟಿ ಕಾದು ನಿಂತಿರುವ ದೃಶ್ಯವಂತೂ ಭೂವೈಕುಂಠ ತಿರುಪತಿಯನ್ನು ನೆನಪಿಗೆ ತರುವಂತಿತ್ತು.

### ಶ್ರೀರಾಘವೇಂದ್ರಾನುಗ್ರಹ ಪ್ರಶಸ್ತಿ ಪ್ರದಾನ ಸಮಾರಂಭ

ಈ ಬಾರಿ ಶ್ರೀರಾಘವೇಂದ್ರಾನುಗ್ರಹ ಪ್ರಶಸ್ತಿಯನ್ನು ಇಬ್ಬರಿಗೆ ನೀಡಲಾಯಿತು. ಮೊದಲನೆಯದಾಗಿ ಧಾರವಾಡದ 'ಕರ್ನಾಟಕ ಇತಿಹಾಸ ಮಂಡಲ'ಕ್ಕೆ, ಮತ್ತೊಂದು ಮರಣೋತ್ತರವಾಗಿ 'ಡಾ. ರಾಜಕುಮಾರ್' ಅವರಿಗೆ ಪ್ರದಾನ ಮಾಡಲಾಯಿತು. ಈ ಎರಡೂ ಪ್ರಶಸ್ತಿಗಳು ತಲಾ ಒಂದು ಲಕ್ಷ ರೂಪಾಯಿಗಳ ನಗದನ್ನು, ಸ್ಮರಣಿಕೆಯನ್ನು ಹೊಂದಿತ್ತು. ''ಶ್ರೀರಾಘವೇಂದ್ರಾನುಗ್ರಹ ಪ್ರಶಸ್ತಿ - ಧಾರ್ಮಿಕ'' ಎನ್ನುವ ಹೆಸರಿನಲ್ಲಿ ಪ್ರದಾನಮಾಡಲಾದ ಪ್ರಶಸ್ತಿಯನ್ನು, ಸುಮಾರು ೯೩ ವರ್ಷಗಳಿಂದ ಭಾರತ ಸಂಸ್ಕೃತಿ ಇತಿಹಾಸ, ಶಾಸನಗಳ ಸಂಶೋಧನೆ, ಅನೇಕ ಅಪ್ರಕಟಿತ ಗ್ರಂಥಗಳ ಪ್ರಕಾಶನ ಮಾಡಿ, ಕರ್ನಾಟಕದ ಭವ್ಯ ಇತಿಹಾಸಕ್ಕೆ ತನ್ನದೇ ಆದ ಕಾಣಿಕೆಯನ್ನು ನೀಡಿದ ಧಾರವಾಡದ 'ಕರ್ನಾಟಕ ಇತಿಹಾಸ ಮಂಡಲ'ಕ್ಕೆ ನೀಡಲಾಯಿತು. ಈ ಪ್ರಶಸ್ತಿಯನ್ನು ಮಂಡಲದ ಕಾರ್ಯನಿರ್ವಾಹಕ ನಿರ್ದೇಶಕರಾದ ಡಾ. ಆನಂದತೀರ್ಥಾಚಾರ್ಯ ಪಂಚಮುಖಿಯವರು ಉಭಯ ಶ್ರೀಪಾದಂಗಳವರಿಂದ ಸ್ವೀಕರಿಸಿದರು. ಪ್ರಶಸ್ತಿಯನ್ನು ಸ್ವೀಕರಿಸಿ ಮಾತನಾಡಿದ ಪಂಚಮುಖಿಯವರು ''ಶ್ರೀರಾಘವೇಂದ್ರಸ್ವಾಮಿಗಳವರ ಮಠವು ಇತ್ತೀಚಿನ ದಿನಗಳಲ್ಲಿ ಅನೇಕ ಜನಪರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ರಾಜಗೋಪಾಲಾಚಾರ್ಯರಂತಹ ಸಮರ್ಥ ನಾಯಕನನ್ನು ಶ್ರೀಮಠ ಹೊಂದಿರುವುದರಿಂದಲೇ ಈ ಎಲ್ಲ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಪುಸ್ತಕ ಪ್ರಕಾಶನ, ಪ್ರಾಚೀನ ಗ್ರಂಥಗಳ ಸಂಶೋಧನೆಯಲ್ಲಿ ಶ್ರೀಮಠ ಹಿಂದೆ ಬಿದ್ದಿಲ್ಲ. ಇಂದು ನಮ್ಮ ಕರ್ನಾಟಕ ಇತಿಹಾಸ ಸಂಶೋಧನಾ ಮಂಡಲಕ್ಕೆ 'ರಾಘವೇಂದ್ರಾನುಗ್ರಹ ಪ್ರಶಸ್ತಿ'ಯನ್ನು ಶ್ರೀಪಾದಂಗಳವರು ಇತ್ತು ಪರಮಾನುಗ್ರಹ ಮಾಡಿರುವುದು ನಮ್ಮನ್ನು ಮತ್ತಷ್ಟು ಕಾರ್ಯೋನ್ಮುಖರಾಗುವಂತೆ ಪ್ರೇರೇಪಿಸಿದೆ'' ಎಂದು ನುಡಿದರು.

### ಡಾ. ರಾಜ್‌ಗೆ ಮರಣೋತ್ತರವಾಗಿ ಶ್ರೀರಾಘವೇಂದ್ರಾನುಗ್ರಹ ಪ್ರಶಸ್ತಿ

ದಿನಾಂಕ ೩೦-೦೮-೨೦೦೭ ರ ಗುರುವಾರದಂದು ಮಂತ್ರಾಲಯದಲ್ಲಿ ಎಲ್ಲಿ ನೋಡಿದರಲ್ಲಿ ಜನ - ಜನ - ಜನ. ಕಾರಣ, ರಾಯರ ಮಧ್ಯಾರಾಧನೆಗೆಂದು

ಮಹಾಪೂರವೇ ಹರಿದುಬಂದಿತ್ತು. ಮತ್ತೊಂದು ಕಾರಣ, ಕನ್ನಡದ ವರನಟ ಡಾ. ರಾಜಕುಮಾರ್‌ರವರಿಗೆ ಮರಣೋತ್ತರವಾಗಿ ನೀಡಲಾದ ಶ್ರೀರಾಘವೇಂದ್ರಾನುಗ್ರಹ ಪ್ರಶಸ್ತಿ ಪ್ರದಾನದ ಕ್ಷಣಗಳನ್ನು ಸವಿಯಲು ರಾಜ್ಯದ ನಾನಾ ಕಡೆಗಳಿಂದ ಜನರು ಆಗಮಿಸಿದ್ದರು. ರಂಗಭವನದ ಮೊದಲ ಮಹಡಿಯಲ್ಲಿ ಉಡುಪಿಯ ಪರ್ಯಾಯದ ಮಾದರಿಯಲ್ಲಿ ಹೂವು, ಹಣ್ಣು, ತೆಂಗಿನಕಾಯಿಗಳಿಂದ ಅಲಂಕೃತವಾದ ಭವ್ಯವಾದ ವೇದಿಕೆಯನ್ನು ನಿರ್ಮಾಣ ಮಾಡಲಾಗಿತ್ತು. ಪಡುಬಿದ್ರಿಯ ಸುಮಾರು ನಲವತ್ತು ಜನ ಈ ಕೆಲಸದಲ್ಲಿ ನಿರತರಾಗಿ ಹಿಂದಿನ ದಿನದಿಂದಲೇ ವೇದಿಕೆ ನಿರ್ಮಾಣದಲ್ಲಿ ತೊಡಗಿದ್ದರು. ಹಣ್ಣು, ಹೂವು, ತೆಂಗಿನಕಾಯಿಗಳು, ಅಡಿಕೆ ಮರ ಮುಂತಾದವುಗಳನ್ನು ಪಡುಬಿದ್ರಿಯಿಂದಲೇ ತಂದು ಈ ಸಭಾಂಗಣವನ್ನು ಸಿಂಗರಿಸಿದ್ದು ವಿಶೇಷವಾಗಿತ್ತು. ಬೆಂಗಳೂರಿನಿಂದ ಶ್ರೀಮತಿ ಪಾರ್ವತಮ್ಮರವರೊಂದಿಗೆ ಸುಮಾರು ೮೦ ಕ್ಕೂ ಹೆಚ್ಚು ಜನ ಕುಟುಂಬದ ಸದಸ್ಯರು ಈ ಕಾರ್ಯಕ್ರಮವನ್ನು ವೀಕ್ಷಿಸಲು ಆಗಮಿಸಿದ್ದರು. ಈ ಎಲ್ಲರಿಗೂ ವಿಶೇಷವಾದ ಆಸನ ವ್ಯವಸ್ಥೆಯನ್ನು ಮಾಡಲಾಗಿತ್ತು ಹಾಗೂ ರಂಗಭವನದಲ್ಲಿ ಸುಮಾರು ಎರಡು ಸಾವಿರ ಕುರ್ಚಿಗಳನ್ನು ವ್ಯವಸ್ಥೆಗೊಳಿಸಿ ಕಾರ್ಯಕ್ರಮವನ್ನು ವೀಕ್ಷಿಸಲು ಅನುವು ಮಾಡಿಕೊಡಲಾಗಿತ್ತು. ಉಭಯ ಶ್ರೀಪಾದಂಗಳವರೊಂದಿಗೆ ಶಿವರಾಜಕುಮಾರ್, ರಾಘವೇಂದ್ರ ರಾಜಕುಮಾರ್, ಪುನೀತ್ ರಾಜಕುಮಾರ್‌ರವರುಗಳು ವಾದ್ಯವೈಭವಗಳೊಡನೆ ಮಹಾಪ್ರಾಕಾರವನ್ನು ಬಳಸಿಕೊಂಡು ವೇದಿಕೆಗೆ ಪ್ರವೇಶಿಸಿದಾಗ ಇಡೀ ಜನಸ್ತೋಮ ಆನಂದದಿಂದ ಪುಳಕಿತವಾಯಿತು. ವೇದಿಕೆಯಲ್ಲಿ ಶ್ರೀಶ್ರೀಪಾದಂಗಳವರೊಂದಿಗೆ ಸ್ಥಳೀಯ ಶಾಸಕ ಶ್ರೀ ಚೆನ್ನಕೇಶವರೆಡ್ಡಿ, ಪಂಢರಾಪುರ ದೇವಸ್ಥಾನದ ಟ್ರಸ್ಟಿಗಳು ಮತ್ತು ಪಂಢರಾಪುರದ ಶಾಸಕರು, ಶ್ರೀಮಠದ ಆಡಳಿತಾಧಿಕಾರಿ ಡಾ. ರೊದ್ದಂ ಪ್ರಭಾಕರರಾವ್, ಶ್ರೀಮತಿ ಪಾರ್ವತಮ್ಮ ರಾಜಕುಮಾರ್, ರಾಘವೇಂದ್ರ ರಾಜಕುಮಾರ್, ಶಿವರಾಜಕುಮಾರ್, ಪುನೀತ್ ರಾಜಕುಮಾರ್ ರವರುಗಳು ವೇದಿಕೆಯನ್ನಲಂಕರಿಸಿದ್ದರು. ಅಧ್ಯಕ್ಷತೆಯನ್ನು ಭಾರತದ ನಿವೃತ್ತ ಮುಖ್ಯನ್ಯಾಯಾಧೀಶರಾದ ಶ್ರೀಮಾನ್ ವೆಂಕಟಾಚಲಯ್ಯನವರು ಹೊತ್ತಿದ್ದರು. ವೇದಘೋಷ, ಪ್ರಾರ್ಥನೆಗಳಾದ ನಂತರ ಮೊದಲಿಗೆ, ಕರ್ನಾಟಕ ಇತಿಹಾಸ ಮಂಡಲಿಗೆ ಶ್ರೀರಾಘವೇಂದ್ರಾನುಗ್ರಹ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ನಂತರ ಮರಣೋತ್ತರವಾಗಿ ಡಾ. ರಾಜಕುಮಾರ್ ರವರಿಗೆ ಈ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ಶ್ರೀಮತಿ ಪಾರ್ವತಮ್ಮ ರಾಜಕುಮಾರ್ ರವರಿಗೆ ಸುಮಂಗಲಿಯರು ಮಾಲಾರ್ಪಣೆ ಮಾಡಿ, ಶಾಲು ಹೊದಿಸಿದರು. ನಂತರ, ಶ್ರೀಪಾದಂಗಳವರು ಶ್ರೀಮಠದ ಅತ್ಯುನ್ನತ ಪ್ರಶಸ್ತಿಯಾದ ಶ್ರೀರಾಘವೇಂದ್ರಾನುಗ್ರಹ ಪ್ರಶಸ್ತಿಯ ಫಲಕವನ್ನು ಶ್ರೀಮತಿ ಪಾರ್ವತಮ್ಮನವರಿಗೆ ಇತ್ತು ಆಶೀರ್ವದಿಸಿದರು.





ಈ ಫಲಕವನ್ನು ತಮ್ಮ ಮೂವರು ಮಕ್ಕಳೊಂದಿಗೆ ಶ್ರೀಪಾದಂಗಳವರಿಂದ ಸ್ವೀಕರಿಸಿದ ಶ್ರೀಮತಿ ಪಾರ್ವತಮ್ಮನವರು ಧನ್ಯತಾಭಾವ ಮೆರೆದರು. ಈ ಪ್ರಶಸ್ತಿಯು ಒಂದು ಲಕ್ಷ ರೂಪಾಯಿಗಳ ನಗದು, ಬೆಳ್ಳಿಯ ರಾಯರ ಸ್ಮರಣಿಕೆ, ರಜತಫಲಕವನ್ನು ಹೊಂದಿತ್ತು. ಪ್ರಶಸ್ತಿ ಸ್ವೀಕರಿಸಿದ ಶ್ರೀಮತಿ ಪಾರ್ವತಮ್ಮನವರು ಭಾವುಕರಾಗಿ ಮಾತನಾಡಿ ''ನರಹಂತಕ ವೀರಪ್ಪನ್ ರಾಜಕುಮಾರ್ ರವರನ್ನು ಕದ್ದೊಯ್ದಾಗ ಅವರನ್ನು ವಾಪಸ್ಸು ಕರೆತಂದದ್ದು ರಾಯರ ಸರ್ವಸಿದ್ಧಿ ಯಂತ್ರ. ವೀರಪ್ಪನ್ ರಾಜ್‌ರನ್ನು ಅಪಹರಿಸಿಕೊಂಡು ಹೋದಾಗ ನಾನು ಮಂತ್ರಾಲಯಕ್ಕೆ ಬಂದು ರಾಯರ ಮೂಲ ಬೃಂದಾವನದ ದರ್ಶನ ಪಡೆದಿದ್ದೆ. ಆಗ ಪೀಠಾಧಿಪತಿ ಶ್ರೀಸುಶಮೀಂದ್ರತೀರ್ಥರು ನನ್ನನ್ನು ಆಶೀರ್ವದಿಸಿ ೧೦೮ ದಿನಗಳಲ್ಲಿ ರಾಜಕುಮಾರ್ ಮರಳಿ ಬರುತ್ತಾರೆ. ನಿಶ್ಚಿಂತೆಯಿಂದ ಹೋಗು ಎನ್ನುತ್ತಾ ಮಾನಸಿಕ ಸ್ಥೈರ್ಯ ತುಂಬಿದ್ದರು. ಶ್ರೀಗಳ ಆಶಯವಾಣಿಯಂತೆ ಹೇಳಿದ ದಿನವೇ ಡಾ. ರಾಜ್ ಕುಟುಂಬದಲ್ಲಿ ಮತ್ತೆ ಒಂದಾದರು. ಅದಾದ ಮೇಲೆ ಮಂತ್ರಾಲಯಕ್ಕೆ ಹೋಗಿ ರಾಯರ ದರ್ಶನ ಪಡೆಯೋಣವೆಂದು ತಯಾರಾಗಿದ್ದ ರಾಜ್ ಅದೇಕೋ ಬಿಟ್ಟುಬಿಟ್ಟರು. ಆದರೆ ದೈವಬಲದಿಂದ ಪೀಠಾಧಿಪತಿಗಳಾದ ಶ್ರೀಸುಶಮೀಂದ್ರತೀರ್ಥರು ಬೆಂಗಳೂರಿನ ನಮ್ಮ ಮನೆಗೆ ಬಂದು ರಾಜ್‌ರನ್ನು ಆಶೀರ್ವದಿಸಿ ಹೋದಮೇಲೆ ಡಾ. ರಾಜ್ ಒಂದು ಮಾತನ್ನು ಹೇಳಿದರು. 'ಪಾರ್ವತೀ, ನಡೆದಾಡುವ ರಾಯರು ನಾವಿದ್ದಲ್ಲಿಗೇ ಬಂದು ಪೂಜೆ ಸ್ವೀಕರಿಸಿದರು. ಇನ್ನು ಆ ರಾಯರು ನಾನಿದ್ದಲ್ಲಿಗೆ ಬಾ ಎಂದು ಹೇಳುತ್ತಿದ್ದಾರೆ' ಎಂದಾಗ ಜಗಳವಾಡಿದ್ದೆ. ಈ ಮಾತನ್ನಾಡಿದ ಹದಿನೈದು ದಿನಗಳಲ್ಲಿ ರಾಜ್ ನಮ್ಮನ್ನಗಲಿದರು. ಈಗ ಈ ಪ್ರಶಸ್ತಿಯ ಮೂಲಕ ಒಡೆಯ ಮತ್ತೆ ಮನೆ ಸೇರಿದ್ದಾರೆ'' ಎಂದು ನುಡಿದರು.

''ಭಕ್ತಿಯನ್ನು ಹುಡುಕಿಕೊಂಡು ಬಂದ ನಮಗೆ ಶ್ರೀಮಠ ಕೊಡಮಾಡಿದ ಈ ಶ್ರೀರಾಘವೇಂದ್ರಾನುಗ್ರಹ ಪ್ರಶಸ್ತಿಯಲ್ಲಿ ನಮ್ಮ ಅಪ್ಪಾಜಿಯನ್ನು ಕಾಣುತ್ತೇವೆ'' ಎಂದು ರಾಘವೇಂದ್ರ ರಾಜಕುಮಾರ್ ಹೇಳಿದರು. ನಂತರ ಶಿವರಾಜಕುಮಾರ್ ಮಾತನಾಡಿ ''ಹತ್ತು ವರ್ಷಗಳ ಹಿಂದೆ ಮಂತ್ರಾಲಯ ಕ್ಷೇತ್ರಕ್ಕೆ ಬಂದಿರುವ ನೆನಪು ಇನ್ನೂ ಇದೆ. ನನಗೆ ತುಂಗೆಯ ತಟದಲ್ಲಿ ಮಿಂದರೆ ಅದೇನೋ ತೃಪ್ತಿಯ ಭಾವನೆ ಮೂಡುತ್ತದೆ. ನಿನ್ನೆ ಮಧ್ಯರಾತ್ರಿ ತುಂಗೆಯಲ್ಲಿ ಮಿಂದು, ಉರುಳುಸೇವೆ ಮಾಡಿದ್ದಾಗಿ ಹೇಳಿ ಶ್ರೀಮಠ ಅನುಗ್ರಹಿಸಿದ ಪ್ರಶಸ್ತಿ ಹಿರಿದಾದುದು'' ಎಂದು ಹೇಳಿದರು. ''ಅಪ್ಪ ನಮ್ಮನ್ನಗಲಿಲ್ಲ. ಅವರು ನಮ್ಮೊಂದಿಗೆ ಇದ್ದಾರೆಂಬುದಕ್ಕೆ ಅನುಗ್ರಹ ಪ್ರಶಸ್ತಿ ಸಾಕ್ಷಿಯಾಗಿದೆ'' ಎಂದು ಪುನೀತ್ ರಾಜಕುಮಾರ್ ತಮ್ಮ ಚಿಕ್ಕ ಭಾಷಣದಲ್ಲಿ

ತಿಳಿಸಿದರು. ಪ್ರತಿವರ್ಷವೂ ಆರಾಧನಾ ದಿನಗಳಲ್ಲಿ ಕುಟುಂಬದವರೊಂದಿಗೆ ಮಂತ್ರಾಲಯ ಯಾತ್ರೆಯನ್ನು ಕೈಗೊಂಡು ರಾಯರ ದರ್ಶನ ಮಾಡುವುದಾಗಿ ಶ್ರೀಮತಿ ಪಾರ್ವತಮ್ಮ ರಾಜಕುಮಾರ್ ರವರು ಶ್ರೀಪಾದಂಗಳವರಲ್ಲಿ ವಿಜ್ಞಾಪಿಸಿದರು. ನಂತರ ಉಭಯ ಶ್ರೀಪಾದಂಗಳವರು ಡಾ. ರಾಜ್ ಕುಟುಂಬದ ಎಲ್ಲ ಸದಸ್ಯರುಗಳಿಗೂ ಫಲಮಂತ್ರಾಕ್ಷತೆ-ಯನ್ನಿತ್ತು ಆಶೀರ್ವದಿಸಿದರು. ಡಾ. ರೊದ್ದಂ ಪ್ರಭಾಕರರಾವ್ ಪ್ರಶಸ್ತಿ ವಿಜೇತರ ಪರಿಚಯವನ್ನು ಹೃದಯಂಗಮವಾಗಿ ಮಾಡಿಕೊಟ್ಟರು.

## ಆಸ್ಥಾನ ವಿದ್ವಾನ್

ಪ್ರತಿವರ್ಷ ರಾಯರ ಆರಾಧನಾ ದಿನದಂದು ನೀಡಲ್ಪಡುವ ಆಸ್ಥಾನ ವಿದ್ವಾನ್ ಪ್ರಶಸ್ತಿಯನ್ನು ಈ ಬಾರಿ ಖ್ಯಾತ ಮೃದಂಗಕಾರರಾದ ಡಾ. ಟಿ.ವಿ. ಗೋಪಾಲಕೃಷ್ಣನ್ ರವರಿಗೆ ನೀಡಿ ಗೌರವಿಸಲಾಯಿತು. ಐವತ್ತು ಸಾವಿರ ರೂಪಾಯಿಗಳ ನಗದು, ಬಂಗಾರದ ಸರ ಮತ್ತು ಬಂಗಾರದ ರಾಯರ ಪದಕ ಹಾಗೂ ಬೆಳ್ಳಿಯ ಸ್ಮರಣಿಕೆಯನ್ನು ಈ ಪ್ರಶಸ್ತಿಯು ಹೊಂದಿತ್ತು. ದಿನಾಂಕ ೩೦-೦೯-೨೦೦೭ ರಂದು ರಂಗಭವನದ ಭವ್ಯವೇದಿಕೆಯಲ್ಲಿ ಈ ಪ್ರಶಸ್ತಿಯನ್ನು ಉಭಯ ಶ್ರೀಪಾದಂಗಳವರು ಜರಿಶಾಲು ಹೊದಿಸಿ, ಆಶೀರ್ವಾದ ಮಾಡುವ ಮೂಲಕ ಪ್ರದಾನ ಮಾಡಿದರು. ಕುಟುಂಬ ಸಮೇತರಾಗಿ ಆಗಮಿಸಿದ ಡಾ. ಟಿ. ವಿ. ಗೋಪಾಲಕೃಷ್ಣನ್ ರವರು ಪ್ರಶಸ್ತಿಯನ್ನು ಸ್ವೀಕರಿಸಿ, ''ಇದು ನನ್ನ ಜೀವನದ ಅತ್ಯುತ್ತಮ ಪ್ರಶಸ್ತಿ. ಇದು ನನ್ನ ಭಾಗ್ಯ'' ಎಂದು ನುಡಿದರು.

## ಆರಾಧನೆಗಾಗಿ ಪತ್ರಿಕೆಗಳ ವಿಶೇಷ ಪುರವಣಿಗಳು

ರಾಯರ ೩೩೬ ನೇ ಆರಾಧನಾ ಸಂದರ್ಭಕ್ಕಾಗಿ ರಾಜ್ಯದ ಅನೇಕ ದಿನಪತ್ರಿಕೆಗಳು, ವಾರಪತ್ರಿಕೆಗಳು, ಮಾಸಪತ್ರಿಕೆಗಳು ವಿಶೇಷ ಪುರವಣಿಗಳನ್ನು ಹೊರತಂದಿದ್ದು ಈ ಬಾರಿಯ ಆರಾಧನಾ ವಿಶೇಷವಾಗಿತ್ತು. ವಿಜಯಕರ್ನಾಟಕ 'ಎಲ್ಲಿ ನಿನ್ನ ಭಕ್ತರೋ ಅಲ್ಲೇ ಮಂತ್ರಾಲಯ' ಎನ್ನುವ ನಾಲ್ಕು ಪುಟಗಳ ವಿಶೇಷ ಪುರವಣಿಯನ್ನು ಹೊರತಂದರೆ, 'ಸಂಯುಕ್ತ ಕರ್ನಾಟಕ' 'ಶ್ರೀಗುರುಸಾರ್ವಭೌಮ' ಎನ್ನುವ ನಾಲ್ಕು ಪುಟಗಳ ಪುರವಣಿಯನ್ನು ಹೊರತಂದಿತು. 'ಕನ್ನಡಪ್ರಭ' 'ಮಂತ್ರಾಲಯಕೆ ಹೋಗೋಣ' ಎನ್ನುವ ನಾಲ್ಕು ಪುಟಗಳ ಪುರವಣಿಯನ್ನು ಹೊರತಂದಿತು. 'ಸುದ್ದಿಮೂಲ' 'ಗುರುರಾಯರ ದರುಶನ ಮಾಡೋಣ' ಎನ್ನುವ ನಾಲ್ಕು ಪುಟಗಳ ಪುರವಣಿಯನ್ನು ಹೊರತಂದಿತು. 'ರಾಯಚೂರು ವಾಣಿ' 'ಕಾಮಧೇನು ಕಲ್ಪವೃಕ್ಷ' ಎಂಬ ಶೀರ್ಷಿಕೆಯೊಡನೆ ಎಂಟು ಪುಟಗಳ ವಿಶೇಷ ಪುರವಣಿಯನ್ನು ಹೊರತಂದಿತು. 'ಪ್ರಜಾವಾಣಿ' ಎರಡು ಪುಟಗಳ ಆರಾಧನಾ ವಿಶೇಷ





ಪುರವಣಿಯನ್ನು, 'ಡೆಕ್ಕನ್ ಹೆರಾಲ್ಡ್' ನಾಲ್ಕು ಪುಟಗಳ ವಿಶೇಷ ಪುರವಣಿಯನ್ನು ಹೊರತಂದರೆ, 'ಕರ್ಮವೀರ' ವಾರಪತ್ರಿಕೆಯು 'ಮಂತ್ರಾಲಯದ ಮಹಾಚೇತನ ಶ್ರೀರಾಘವೇಂದ್ರ' ಎಂಬ ಶೀರ್ಷಿಕೆಯಲ್ಲಿ ವಿಶೇಷ ಸಂಚಿಕೆಯನ್ನು ಹೊರತಂದಿತು. ತರಂಗ ವಾರಪತ್ರಿಕೆ ಹದಿನೆಂಟು ಪುಟಗಳ ಸುದೀರ್ಘ ಲೇಖನಗಳೊಂದಿಗೆ ರಾಯರ ಮತ್ತು ಅವರ ಪರಮಗುರುಗಳಾದ ಶ್ರೀವಿಜಯೀಂದ್ರರ ಬಗೆಗಿನ ವಿಶೇಷ ಸಂಚಿಕೆ-ಯನ್ನು ಹೊರತಂದಿತು. 'ಸುಧಾ' ವಾರಪತ್ರಿಕೆಯು ಎರಡು ಪುಟಗಳ ವಿಶೇಷ ಲೇಖನವೊಂದನ್ನು ಪ್ರಕಟಿಸಿತು. ಇದಕ್ಕೆ ಪೂರ್ವಭಾವಿಯಾಗಿ ಅನೇಕ ದಿನಪತ್ರಿಕೆಗಳು ರಾಯರ ಆರಾಧನಾ ವಿಶೇಷವನ್ನು ಸಾಲುಸಾಲಾಗಿ ಪ್ರಕಟಿಸಿ ಮಂತ್ರಾಲಯಕ್ಕೆ ಮತ್ತಷ್ಟು ಜನಪ್ರವಾಹ ಹರಿದುಬರುವಂತೆ ಮಾಡಿದ್ದವು. ಪತ್ರಿಕಾ ಮಾಧ್ಯಮಗಳು ಇಷ್ಟೊಂದು ರಾಯರ ಬಗ್ಗೆ ಇಷ್ಟೊಂದು ಪ್ರಚಾರ ಮಾಡಿರುವುದು ಅಚ್ಚರಿಯೆನಿಸುತ್ತದೆ. ಇದೆಲ್ಲ ರಾಯರ ವೈಭವವೇ ಸರಿ.

## ನೇರಪ್ರಸಾರದಲ್ಲಿ ಮಂತ್ರಾಲಯ

ಪತ್ರಿಕಾ ಮಾಧ್ಯಮಗಳು ಒಂದು ರೀತಿಯದ್ದಾದರೆ, ದೃಶ್ಯಮಾಧ್ಯಮಗಳದ್ದೇ ಒಂದು ರೀತಿ. ಈ ಬಾರಿಯ ಆರಾಧನೆಯನ್ನು ನೇರಪ್ರಸಾರ ಮಾಡಲು ರಾಷ್ಟ್ರದ ಅನೇಕ ಚಾನೆಲ್ ಗಳು ಪೈಪೋಟಿಯಲ್ಲಿದ್ದವು ಎಂದರೆ ಅತಿಶಯೋಕ್ತಿಯಾಗಲಾರದು. ಮಧ್ಯಾರಾಧನಾ ನೇರಪ್ರಸಾರವನ್ನು ಈ ಟಿವಿ ಕನ್ನಡ ಬೆಳಗ್ಗೆ ೮ ಘಂಟೆಯಿಂದ ೧ ಘಂಟೆಯವರೆಗೆ ನೀಡಿದರೆ, ಉತ್ತರಾರಾಧನಾ ದಿನದ ನೇರಪ್ರಸಾರವನ್ನು ಝೀ ಟಿವಿ ಕನ್ನಡ ಬೆಳಗ್ಗೆ ೮ ಘಂಟೆಯಿಂದ ೧ ಘಂಟೆ ೩೦ ನಿಮಿಷದವರೆಗೆ ನೀಡಿತ್ತು. ಇದಲ್ಲದೆ, ಮಂತ್ರಾಲಯದ ತಾಜಾ ಸುದ್ದಿಗಳನ್ನು ಟಿವಿ-೯ ಚಾನೆಲ್ ಗಂಟೆಗೊಮ್ಮೆ ನೇರಪ್ರಸಾರ ಮಾಡುತ್ತಲಿತ್ತು. ಕನ್ನಡದ ಸುವರ್ಣ ಟಿವಿ, ಕಸ್ತೂರಿ ಟಿವಿ, ಚಂದನ ಟಿವಿ, ಆಂಧ್ರದ ಈ ಟಿವಿ ತೆಲುಗು, ಝೀ ಟಿವಿ ತೆಲುಗು, ಮಾ ಟಿವಿ ತೆಲುಗು, ಟಿವಿ-೯ ತೆಲುಗು, ಸಂಸ್ಕೃತಿ ಚಾನೆಲ್, ಡಿಡಿ-೮, ಸಪ್ತಗಿರಿ ಚಾನೆಲ್, ಇನ್ನೂ ಮುಂತಾದ ವಾಹಿನಿಗಳು ರಾಷ್ಟ್ರದ ಮೂಲೆ ಮೂಲೆಗಳಿಗೆ ರಾಯರನ್ನು, ರಾಯರ ಮಹಿಮೆ-ಯನ್ನು ಕೊಂಡೊಯ್ಯುವಲ್ಲಿ ಸಹಕರಿಸಿದವು. ಮಾಧ್ಯಮಗಳ ಸಹಕಾರ ಶ್ಲಾಘನೀಯ.

## ಬೆಳ್ಳಿಯ ಅಂಬಾರಿ ಸಮರ್ಪಣೆ

ಅಂಬಾರಿ ಎಂದರೆ ಥಟ್ಟನೆ ನೆನಪಾಗುವುದು ಮೈಸೂರಿನ ಜಂಬೂಸವಾರಿ ಉತ್ಸವ. ಮೈಸೂರಿಗೂ ಮಂತ್ರಾಲಯ ಮಠಕ್ಕೂ ಅದೇನೋ ಒಂಥರಹದ ನಂಟು. ಪೀಠಾಧಿಪತಿಗಳಾದ ಶ್ರೀಸುಶಮೀಂದ್ರತೀರ್ಥರು ತಮ್ಮ ಪೂರ್ವಾಶ್ರಮದಲ್ಲಿ ಜಂಬೂಸವಾರಿಯಲ್ಲಿ ಅಂಬಾರಿಯನ್ನು ಕಂಡಾಗಲೆಲ್ಲಾ ನಮ್ಮ ರಾಯರಿಗೆ ಅಂಬಾರಿ

ಮಾಡಿಸಬೇಕು. ಅಂಬಾರಿಯಲ್ಲಿ ರಾಯರನ್ನು ಕುಳ್ಳಿರಿಸಬೇಕೆಂದು ಅಪೇಕ್ಷೆ ಪಡುತ್ತಿದ್ದರಂತೆ. ಶ್ರೀಪಾದಂಗಳವರ ಬಹುದಿನಗಳ ಆಸೆ ೩೩೬ ನೇ ಆರಾಧನಾ ಮಹೋತ್ಸವಕ್ಕೆ ಪೂರ್ಣಗೊಂಡಿತು ಎಂದು ಹೇಳಿದರೆ ತಪ್ಪಾಗಲಾರದು. ಮೈಸೂರು ಆಸ್ಥಾನದ ಮರಗೆಲಸದ ಕುಶಲಕರ್ಮಿಗಳನ್ನು ಕರೆಸಿ, ಬಹುಸುಂದರವಾಗಿ ನಿರ್ಮಿಸಿದ ಅಂಬಾರಿಗೆ ಆಂಧ್ರದ ಉದ್ಯಮಿ ತಿಕ್ಕಾರೆಡ್ಡಿಯವರು ಸುಮಾರು ಹನ್ನೆರಡು ಲಕ್ಷ ರೂಪಾಯಿಗಳಲ್ಲಿ ಬೆಳ್ಳಿಯ ಕವಚವನ್ನು ನಿರ್ಮಾಣ ಮಾಡಿಸಿದರು. ಮಧುರೈನ ಶಂಕರ್ ತಂಡದವರು ಉತ್ತಮ ಕುಸುರಿ ಕೆಲಸಗಳೊಂದಿಗೆ ಅತ್ಯುತ್ತಮ ಅಂಬಾರಿಯನ್ನು ಸಿದ್ಧಪಡಿಸಿದರು. ರಾಯರ ಮಧ್ಯಾರಾಧನಾ ದಿನವಾದ ದಿನಾಂಕ ೩೦-೦೯-೨೦೦೭ ರಂದು ರಾತ್ರಿ ಅಪೂರ್ವವಾಗಿ ಸಿಂಗರಿಸಿದ ಆನೆಯ ಮೇಲೆ ಬೆಳ್ಳಿಯ ಅಂಬಾರಿಯಲ್ಲಿ ಪ್ರಹ್ಲಾದರಾಜರ ಉತ್ಸವಮೂರ್ತಿಯನ್ನು ಕೂಡಿಸಿ ವಿಶೇಷ ಮೆರವಣಿಗೆಯನ್ನು ಮಾಡಲಾಯಿತು.

## ಬಂಗಾರದ ಪಲ್ಲಕ್ಕಿ ಸಮರ್ಪಣೆ

೩೩೬ ನೇ ಆರಾಧನಾ ಮಹೋತ್ಸವದ ನಿಮಿತ್ತವಾಗಿ ರಾಯರಿಗೆ ಬಂಗಾರದ ಪಲ್ಲಕ್ಕಿಯನ್ನು ಸಮರ್ಪಣೆ ಮಾಡಲಾಯಿತು. ಸುಮಾರು ಹನ್ನೆರಡು ಕೆ.ಜಿ. ಬಂಗಾರದಲ್ಲಿ ಈ ಪಲ್ಲಕ್ಕಿಯನ್ನು ನಿರ್ಮಾಣ ಮಾಡಲಾಗಿದೆ. ಬೆಂಗಳೂರಿನ ಶ್ರೀ ವಾಮನರಾವ್ ಮತ್ತು ಕುಟುಂಬದವರು ಈ ಬಂಗಾರದ ಪಲ್ಲಕ್ಕಿಯ ದಾನಿಗಳಾಗಿದ್ದು, ಈಗ ಪ್ರಸ್ತುತ ನಾಲ್ಕು ಕೆ.ಜಿ. ಬಂಗಾರದಲ್ಲಿ ನಿರ್ಮಾಣ ಮಾಡಲಾಗಿದೆ. ಉಳಿದವುಗಳನ್ನು ಭಾಗಗಳನ್ನು ಕೆಲದಿನಗಳಲ್ಲಿ ನಿರ್ಮಾಣ ಮಾಡಲಾಗುವುದು ಎಂದು ಶ್ರೀಗಳವರ ಆಪ್ತಕಾರ್ಯದರ್ಶಿಗಳು ತಿಳಿಸಿದರು.

## ನೂತನ ಭೋಜನಶಾಲೆ ಉದ್ಘಾಟನೆ

ಮಂತ್ರಾಲಯಕ್ಕೆ ಬರುತ್ತಿರುವ ಯಾತ್ರಾರ್ಥಿಗಳ ಸಂಖ್ಯೆ ದಿನದಿನಕ್ಕೂ ಹೆಚ್ಚುತ್ತಿದ್ದಂತೆ ಯಾತ್ರಾರ್ಥಿಗಳಿಗೆ ಉತ್ತಮ ಸೌಕರ್ಯಗಳನ್ನು ಕಲ್ಪಿಸುವುದು ಕೂಡಾ ಮಠದ ಜವಾಬ್ದಾರಿಯಾಗಿರುತ್ತದೆ. ಈ ಹಿಂದೆ ಇನ್‌ಫೋಸಿಸ್ ನ ಶ್ರೀಮತಿ ಸುಧಾ ನಾರಾಯಣಮೂರ್ತಿಯವರು ನಿರ್ಮಿಸಿಕೊಟ್ಟ 'ಅನ್ನಪೂರ್ಣ ಭೋಜನಶಾಲೆ'ಯು ಈಗಿನ ಮಂತ್ರಾಲಯದ ಸ್ಥಿತಿಗೆ ಸಾಲದಾಗಿತ್ತು. ಇನ್ನೊಂದು ಬೃಹದಾಕಾರದ ಭೋಜನಶಾಲೆ ನಿರ್ಮಿಸಬೇಕೆಂಬ ಇಂಗಿತವನ್ನು ಶ್ರೀಶ್ರೀಪಾದಂಗಳವರು ರಾಯರ ಅಂತರಂಗ ಭಕ್ತರಾದ ಹೊಸಪೇಟೆಯ ರಂಗನಗೌಡರಿಗೆ ತಿಳಿಸಿದರು. ಶ್ರೀಪಾದಂಗಳವರ ಇಂಗಿತವನ್ನು ಆಜ್ಞೆಯೆಂದು ಸ್ವೀಕರಿಸಿ ರಂಗನಗೌಡರು ಕೂಡಲೇ ಕಾರ್ಯಪ್ರವೃತ್ತ-





ರಾದರು. ಶ್ರೀಮಠದ ಪ್ರಾಂಗಣಕ್ಕೆ ಹೊಂದಿಕೊಂಡ ಜಾಗದಲ್ಲಿ ಭವ್ಯ ಭೋಜನಶಾಲೆಯನ್ನು ನಿರ್ಮಿಸಲು ಪ್ರಾರಂಭಿಸಿದರು. ಕೇವಲ ಒಂಭತ್ತು ತಿಂಗಳಲ್ಲಿ ಎರಡು ಅಂತಸ್ತಿನ ಈ ಸಭಾಭವನವನ್ನು ನಿರ್ಮಿಸ- ಲಾಯಿತು. ಸಭಾಭವನವನ್ನು ಮಾರ್ಬಲ್ ಮತ್ತು ಗ್ರಾನೈಟ್ ಶಿಲೆಗಳನ್ನು ಬಳಸಿ ನಿರ್ಮಿಸಲಾಗಿದೆ. ಈ ಭವನವನ್ನು ಮೈಸೂರು ಶೈಲಿಯ ಅರಮನೆಯ ಮಾದರಿಯಲ್ಲಿ ಕಲಾತ್ಮಕವಾಗಿ ನಿರ್ಮಿಸಲಾಗಿದೆ. ಸುಮಾರು ನಾಲ್ಕು ಕೋಟಿ ಮೂವತ್ತು ಲಕ್ಷ ರೂಪಾಯಿಗಳನ್ನು ವೆಚ್ಚಮಾಡಿ ನಿರ್ಮಿಸಿದ ಈ ಸಭಾಭವನಕ್ಕೆ ಶ್ರೀಸುಶಮೀಂದ್ರತೀರ್ಥರು 'ರಂಗಭವನ' ಎಂದು ನಾಮಕರಣ ಮಾಡಿರುವುದು ಅನ್ವರ್ಥಕವಾಗಿದೆ. ಮಂತ್ರಾಲಯದಲ್ಲಿರುವ ಕಲಾತ್ಮಕ ಭವನಗಳ ಸಾಲಿಗೆ ಈ ಭವನವು ಮತ್ತೊಂದು ಸೇರ್ಪಡೆಯಾಗಿದೆ.

## ಮಹಾರಥ ಸಮರ್ಪಣೆ

೧೯೦೫ ರಲ್ಲಿ ಶ್ರೀಸುಶೀಲೇಂದ್ರತೀರ್ಥರು ನಿರ್ಮಿಸಿದ ಮಹಾರಥವು ಶಿಥಿಲಗೊಂಡಿದ್ದರಿಂದ ನೂತನ ರಥವನ್ನು ನಿರ್ಮಾಣ ಮಾಡಬೇಕೆಂದು ಶ್ರೀಶ್ರೀಪಾದಂಗಳವರ ಸಂಕಲ್ಪದಂತೆ ಬೆಂಗಳೂರಿನ ಶ್ರೀ ಶಿವಶಂಕರ್ ಮಾದನೇನಿ ಹಾಗೂ ವಿಧಾನ ಪರಿಷತ್ ಸದಸ್ಯ ಶ್ರೀ ಅರವಿಂದ ಲಿಂಬಾವಳಿ ಯವರು ಸುಮಾರು ಹದಿನಾರು ಲಕ್ಷ ರೂಪಾಯಿಗಳಲ್ಲಿ ನಿರ್ಮಿಸಿದ ಮೂವತ್ತು ಅಡಿ ಬೃಹತ್ ರಥವನ್ನು ೩೩೬ ನೇ ಆರಾಧನಾ ಸಂಸ್ಮರಣಾರ್ಥ ಶ್ರೀರಾಘವೇಂದ್ರತೀರ್ಥಗುರುಸಾರ್ವಭೌಮರಿಗೆ ಸಮರ್ಪಿಸಲಾಯಿತು. ಕೇವಲ ನಲವತ್ತೈದು ದಿನಗಳಲ್ಲಿ ಮೈಸೂರು ಮಹಾರಾಜರ ಕಾಲದಲ್ಲಿ ರಥಶಿಲ್ಪಿಗಳೆನಿಸಿಕೊಂಡ ಶಿವಮೊಗ್ಗದ ಮರೂರು ಮಾಲ್ತೇಶ್ ಹಾಗೂ ಮರೂರು ಗಜಾನನ ಮತ್ತು ಐವತ್ತು ಜನ ಕುಶಲಕರ್ಮಿಗಳೊಂದಿಗೆ ಈ ರಥ ತಯಾರಿಸಲಾಗಿದೆ. ಈ ರಥಕ್ಕೆ ಸಾಗವಾನಿ ಜೊತೆಗೆ ಐದು ತೆರನಾದ ಮರಗಳನ್ನು ಬಳಸಿಕೊಂಡು ಹಗಲು-ರಾತ್ರಿ ದುಡಿದು ಮಹಾರಥವನ್ನು ತಯಾರಿಸಲಾಗಿದೆ. ಮೂರು ಭಾಗಗಳಾಗಿ ಬೆಂಗಳೂರಿನಿಂದ ಮಂತ್ರಾಲಯಕ್ಕೆ ತಂದು ಇಪ್ಪತ್ತು ಜನ ಕಾರ್ಮಿಕರೊಂದಿಗೆ ಎರಡು ದಿನಗಳ ಕಾಲ ಇದನ್ನು ಇಲ್ಲಿ ಸಿದ್ಧಪಡಿಸಿ ಮಹಾರಥೋತ್ಸವಕ್ಕೆ ನೀಡಿದ್ದು, ಈ ಸಲದ ಆರಾಧನೆಯ ವಿಶೇಷವಾಗಿತ್ತು.

## ಮಹಾರಥೋತ್ಸವ

ಮಂತ್ರಾಲಯದಲ್ಲಿ ಪ್ರಪ್ರಥಮ ಬಾರಿಗೆ ಮಹಾರಥವು ಊರಿನ ಬೀದಿಗಳಲ್ಲಿ ಹಾದುಹೋದದ್ದು ಈ ಬಾರಿಯ ಮಹಾರಥೋತ್ಸವದ ವಿಶೇಷ. ಮೈಸೂರು ದಸರೆಯನ್ನು ನೆನಪಿಸುವಂತಹ ಸಂಭ್ರಮ, ಸಾಗರದಷ್ಟು ಭಕ್ತಸಮೂಹ, ಮೂವತ್ತಕ್ಕೂ

ಹೆಚ್ಚು ಕಲಾತಂಡಗಳ ಆಕರ್ಷಣೆಯ ಜೊತೆಗೆ ಸುಂದರವಾಗಿ ಅಲಂಕಾರಗೊಂಡ ತಂಜಾವೂರು ಶೈಲಿಯ ಕಟ್ಟಿಗೆಯ ಮಹಾರಥ, ಬೆಳ್ಳಿಯ ಅಂಬಾರಿ, ಬಂಗಾರದ ಪಲ್ಲಕ್ಕಿ, ಇವುಗಳು ರಥೋತ್ಸವದ ಆಕರ್ಷಣೆಯಾಗಿತ್ತು. ತಂಪಾದ ವಾತಾವರಣದಲ್ಲಿ ಭಜನಾಮಂಡಲಿಗಳು, ಕೀಲುಕುದುರೆಗಳು, ವೀರಗಾಸೆ ಕುಣಿತದವರು, ಹುಲಿವೇಷದವರು, ಮರದ ಕಾಲು ಕುಣಿತದವರು, ಇಪ್ಪತ್ತಕ್ಕೂ ಹೆಚ್ಚು ವಾದ್ಯಮೇಳಗಳು, ಕೇರಳದ ಚಂಡೆ, ಉಡುಪಿಯ ಚಂಡೆ, ತಂಜಾವೂರಿನ ನಾದಸ್ವರ, ತಂಜಾವೂರು ಗೊಂಬೆ ಕುಣಿತ, ಕೇರಳದ ವಾದ್ಯವೃಂದ, ಮುಧೋಳದ ಕುದುರೆ ಕುಣಿತ ತಂಡ, ಹೇರೂರು ಅಂಬಿಗರ ಚೌಡಯ್ಯ ಹೆಜ್ಜೆ ಕುಣಿತ, ಸೊಂಡೂರು ಅರೇದರೋಜಿಯ ಹಗಲುವೇಷ ತಂಡ, ಗೋರ್ಲೆಕೊಪ್ಪದ ಕರಡಿಮಜಲು, ಯಾಪಲಪರ್ವಿಯ ಹಗಲುವೇಷ ತಂಡ, ಕುಕನೂರಿನ ಕರಡಿಮಜಲು ತಂಡ, ಲಿಂಗಸೂಗೂರಿನ ಕಣಿ ಮತ್ತು ಹಲಗೆ ತಂಡ, ಶಿಗ್ಗಾವಿ ತಾಲೂಕಿನ ನಾರಾಯಣಪುರದ ಬಸವೇಶ್ವರ ಝಾಂಜ್ ಪಥಕ್ ಮೇಳ, ಕರೀಮುರಿಯ ಕೋಲಾಟ ತಂಡ, ವಿದ್ಯಾಪೀಠದ ಭಜನಾಮಂಡಲಿ, ಮಂತ್ರಾಲಯದ ಭಜನಾಮಂಡಲಿ, ಮಂತ್ರಾಲಯದ ನಾದಸ್ವರ, ಸಂಸ್ಕೃತ ವಿದ್ಯಾಪೀಠದ ವಿದ್ಯಾರ್ಥಿ-ಗಳಿಂದ ಹನುಮಂತನ ವೇಷ, ಶ್ರೀರಾಘವೇಂದ್ರರ ವೇಷ, ಬಾಲಕೃಷ್ಣನ ವೇಷ, ಹರಿದಾಸರುಗಳ ವೇಷಗಳು ಎಲ್ಲರ ಮನಸೂರೆಗೊಂಡವು. ಇನ್ನು ಮುಂತಾದ ವೇಷಗಳು ರಥೋತ್ಸವದ ಮುಂಭಾಗದಲ್ಲಿ ಸಾಗುತ್ತಿದ್ದವು. ಇದಕ್ಕೆ ಮುಂಚಿತವಾಗಿ ನಾದಸ್ವರಗಳೊಡನೆ ಪ್ರಹ್ಲಾದರಾಜರ ಉತ್ಸವಮೂರ್ತಿಯನ್ನು ಮಹಾದ್ವಾರದಿಂದ ಕರೆದುತಂದು ಮಹಾರಥದಲ್ಲಿಟ್ಟಾಗ ನೆರೆದಿದ್ದ ಭಕ್ತಜನ 'ರಾಘವೇಂದ್ರ, ರಾಘವೇಂದ್ರ' ಎಂಬ ಉದ್ಗಾರವನ್ನು ಮಾಡಿದರು. ನಂತರ ಉಭಯ ಶ್ರೀಪಾದಂಗಳವರು ರಥಪೂಜೆಯನ್ನು ಮಾಡಿ ಪ್ರಹ್ಲಾದರಾಜರಿಗೆ ಮಂಗಳಾರತಿಯನ್ನು ನೆರವೇರಿಸು-ವುದರ ಮೂಲಕ ಮಹಾರಥೋತ್ಸವಕ್ಕೆ ಚಾಲನೆಯನ್ನು ನೀಡಿದರು. ಮಹಾರಥೋತ್ಸವದಲ್ಲಿ ಪಾಲ್ಗೊಳ್ಳಲು ಬೆಳಗ್ಗೆಯಿಂದಲೇ ಸಹಸ್ರಾರು ಜನ ಭಕ್ತರು ಕಾತುರರಾಗಿದ್ದರು.

ಭಕ್ತಜನತೆಯನ್ನುದ್ದೇಶಿಸಿ ರಥದ ಮೇಲ್ಭಾಗದಲ್ಲಿದ್ದ ಶ್ರೀಸುಶಮೀಂದ್ರತೀರ್ಥರು ಮಾತನಾಡಿ "**ಶಾಂತಿ - ನೆಮ್ಮದಿ ಹಾಳುಮಾಡುವ ಭಯೋತ್ಪಾದನೆಯಂಥ ಚಟುವಟಿಕೆಗಳು ನಿಲ್ಲಬೇಕು. ಜಗತ್ತಿನಾದ್ಯಂತ ಮಳೆ - ಬೆಳೆ ಚೆನ್ನಾಗಿ ಆಗಬೇಕು. ರಾಯರ ಅನುಗ್ರಹ ಭಕ್ತರಿಗೆ ಇದ್ದೇ ಇರುತ್ತದೆ. ಭಕ್ತರ ಸಂಕಷ್ಟ ಪರಿಹರಿಸಿ ಶಾಂತಿ - ನೆಮ್ಮದಿ ನೀಡುತ್ತಾರೆ.** ಹಾಗಾಗಿ ಭಕ್ತರು, ದಾನಿಗಳು ಶ್ರೀಮಠದ ಮೂಲಕ ಅಭಿವೃದ್ಧಿಕಾರ್ಯ ಕೈಗೊಳ್ಳುತ್ತಿದ್ದಾರೆ. ಶಿಕ್ಷಣ, ಸಾಹಿತ್ಯ, ಧಾರ್ಮಿಕ ಕಾರ್ಯ ಚಟುವಟಿಕೆಗಳಲ್ಲಿ ಸಾಕಷ್ಟು ಕಾರ್ಯಗಳನ್ನು ಶ್ರೀಮಠದಿಂದ





ಕೈಗೊಳ್ಳಲಾಗಿದೆ. ರಾಯರ ಅನುಗ್ರಹದಿಂದ, ಆಂಧ್ರಪ್ರದೇಶ, ಕರ್ನಾಟಕ ಮತ್ತಿತರ ಸರ್ಕಾರಗಳು ಸಾಕಷ್ಟು ಸಹಕಾರ ನೀಡುತ್ತಿವೆ. ಆಂಧ್ರ, ಕರ್ನಾಟಕ, ತಮಿಳುನಾಡು ಸೇರಿದಂತೆ ಎಲ್ಲೆಡೆ ಇರುವ ರಾಯರ ಮಠಗಳ ಅಭಿವೃದ್ಧಿಗೆ ಶ್ರೀಮಠ ಯೋಜನೆ ರೂಪಿಸುತ್ತಿದೆ'' ಎಂದು ನುಡಿದರು.

ಶ್ರೀಸುಯತೀಂದ್ರರು ಮಾತನಾಡಿ "**ತಾಮಸ ಗುಣವು ಮನುಷ್ಯನನ್ನು ವಿಕಾರ-ಗೊಳಿಸಿ ಹಿಂಸಾಚಾರಕ್ಕೆ ಪ್ರಚೋದಿಸುತ್ತಿದ್ದು, ನಿಷ್ಪಾಪಿಗಳು ಬಲಿಯಾಗುತ್ತಿದ್ದಾರೆ**" ಎಂದು ಕಳವಳ ವ್ಯಕ್ತಪಡಿಸಿ, "**ಭಕ್ತರು ದುಡಿದ ಹಣ ಸೇವೆಗೆ ಬಳಸುತ್ತಿದ್ದು, ಹೃದಯ ವೈಶಾಲ್ಯತೆ, ಧರ್ಮನಿಷ್ಠೆ ಎತ್ತಿತೋರಿಸುತ್ತದೆ. ಸೇವಾ ಮನೋಭಾವ-ದವರನ್ನು ರಾಯರು ಸದಾ ನೆರಳಿನಂತೆ ಕಾಪಾಡುತ್ತಾರೆ. ದಾನಿಗಳ ದೊಡ್ಡ ಪಡೆಯೇ ಶ್ರೀಮಠದ ಬೆನ್ನಿಗೆ ನಿಂತಿದ್ದು, ಈ ಸೇವಾಗುಣಕ್ಕೆ ಹುರಿದುಂಬಿಸುವ ಕಾರ್ಯ ಮಾಡಲಾಗುತ್ತಿದೆ. ತತ್ಫಲ ಮಂತ್ರಾಲಯ ಪುಣ್ಯಕ್ಷೇತ್ರದಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಗುರುರಾಜರ ಅನುಗ್ರಹದಿಂದ ಎಲ್ಲ ಕ್ಷೋಭೆಗಳು ನೀರ ಮೇಲಣ ಗುಳ್ಳೆಯಂತೆ ಕರಗಿ ಹೋಗಿ ಸಕಲ ಮಾನವ ಕುಲಕ್ಕೆ ಸುಖ, ಶಾಂತಿ, ನೆಮ್ಮದಿ ಸಿಗಲಿ**'' ಎಂದು ಆಶೀರ್ವದಿಸಿದರು.

**ವರದಿ : ಸೂರೀಂದ್ರ**


## ಶ್ರೀಪವಮಾನ ಟೂರ್ಸ್ - ಹೈದ್ರಾಬಾದ್

**ಶ್ರೀರಾಮೇಶ್ವರ ಯಾತ್ರಿಕರಿಗೆ ಅನುಭವಿಕರಿಂದ ಸೆಮಿ-ಲಕ್ಷುರಿ ಬಸ್ಸಿನಲ್ಲಿ ರಾತ್ರಿಪ್ರವಾಸರಹಿತ**

## ದಕ್ಷಿಣ ಭಾರತ ತೀರ್ಥಕ್ಷೇತ್ರಗಳ ಪ್ರವಾಸ

**ದಿನಾಂಕ 29-11-2007 ರಿಂದ 18 ದಿನಗಳವರೆಗೆ**

**ಯಾತ್ರಾಸ್ಥಳಗಳು**

ಶ್ರೀಶೈಲ, ಅಹೋಬಲ, ತಿರುಪತಿ, ಮಂಗಾಪುರ, ಶಿವಕಂಚಿ, ವಿಷ್ಣುಕಂಚಿ, ತಿರುಕೋಯಿಲೂರ, ಕುಂಭಕೋಣಂ, ತಂಜಾವೂರು, ಶ್ರೀರಂಗಂ, ಮಧುರೈ, ರಾಮೇಶ್ವರ, ಕನ್ಯಾಕುಮಾರಿ, ಸುಚೀಂದ್ರಂ, ತ್ರಿವೇಂದ್ರಂ, ಜನಾರ್ಧನ, ಗುರುವಾಯೂರು, ಉಡುಪಿ, ಪಾಜಕಕ್ಷೇತ್ರ, ಗೋಕರ್ಣ, ಸ್ವಾದಿ, ಸವಣೂರು ಹಾಗೂ ಅನೇಕ ಮೂಲವೃಂದಾವನಗಳು ಸೇರಿವೆ.

(ಈ ಸುದೀರ್ಘ ಪ್ರವಾಸದಲ್ಲಿ ಪ್ರತಿನಿತ್ಯ ದೇವರಪೂಜೆ, ತೀರ್ಥಪ್ರಸಾದ, ಕಾಫಿ / ಚಹ, ಸಾಯಂಕಾಲ ಪೂರ್ತಿ ಫಲಹಾರ ಹಾಗೂ ವಸತಿ ಸೌಕರ್ಯ ಸೇರಿದೆ.)

**ಸೀಟು ಒಂದಕ್ಕೆ ರೂ. 7,500/-ಮಾತ್ರ**

ಇಂದೇ ಸೀಟೊಂದಕ್ಕೆ ರೂ. ೨,೦೦೦/- ಕಳುಹಿಸಿ ನಿಮ್ಮ ಸೀಟು ರಿಸರ್ವ್ ಮಾಡಿಸಿಕೊಳ್ಳಿ.

ವ್ಯವಸ್ಥಾಪಕರು : **K. BALARAMACHAR**

H.NO. 3-3-84/1, Chappal Bazaar, Near Manjira Hotel, Kachiguda, Hyderabad - 27 — ✆ 040-24611635 Cell : 094409 29567

# ಶ್ರೀಸರಸ್ವತೀ ಟೂರ್ಸ್ ಅಂಡ್ ಟ್ರಾವೆಲ್ಸ್

ನಂ. 2, ಅಗಸ್ತಿಯಾರ್ ಸ್ಟ್ರೀಟ್, ತಾಂಬರಮ್ ಈಸ್ಟ್, ಚೆನ್ನೈ - 600 059. **ದೂ. 044-22390890**

(೨೦೦೨ ಮತ್ತು ೨೦೦೪ ರಲ್ಲಿ ಚೆನ್ನೈನಲ್ಲಿರುವ ಅತ್ಯುತ್ತಮ ಯಾತ್ರಾ ಪ್ರವಾಸೋದ್ಯಮವೆಂದು ಪ್ರಶಸ್ತಿ ಪಡೆದಿದೆ)

**ಕರ್ನಾಟಕದ ಯಾತ್ರಿಗಳಿಗೆ ಪ್ರವಾಸ 1, ಪ್ರವಾಸ 2, ಪ್ರವಾಸ 4, ಪ್ರವಾಸ 5 ಮತ್ತು ಪ್ರವಾಸ 5 ಕ್ಕೆ ಅವರ ವಾಸಸ್ಥಳದಿಂದ ಹೋಗಿ ಬರುವ ರೈಲ್ವೇ II Sitting Class Ticket ವೆಚ್ಚವೂ ಸೇರಿದೆ. ಶ್ರೀಬದರೀನಾರಾಯಣನ ಅನುಗ್ರಹದೊಂದಿಗೆ, 2007 ರಲ್ಲಿ ಕೆಳಗಿನ ತೀರ್ಥಯಾತ್ರಾ ಪ್ರವಾಸಗಳನ್ನು ಚೆನ್ನೈನಿಂದ ವ್ಯವಸ್ಥೆ ಮಾಡಲಾಗಿದೆ.**

**ಪ್ರವಾಸ 1**

**ದಿನಾಂಕ 20-09-2007 ರಿಂದ 21 ದಿನಗಳು**

**ಬದರೀ / ಕಾಶೀ / ಗಯಾ ಯಾತ್ರಾ - ಒಬ್ಬರಿಗೆ ರೂ. 9,000/-**

**ಸ್ಥಳಗಳು** : ಮಥುರಾ, ಬೃಂದಾವನ, ಆಗ್ರಾ, ದೆಹಲಿ, ಹರಿದ್ವಾರ, ಹೃಷೀಕೇಶ, ಬದರೀನಾಥ, ಅಲಹಾಬಾದ್, ಅಯೋಧ್ಯಾ, ವಾರಣಾಸಿ (ಕಾಶಿ), ಗಯಾ, ಪುರಿ, ಕೊನಾರ್ಕ್, ಭುವನೇಶ್ವರ ಮತ್ತು ಧವಳಗಿರಿ

**ಪ್ರವಾಸ 2**

**ದಿನಾಂಕ 20-09-2007, ರಿಂದ 12 ದಿನಗಳು - ಬದರೀಯಾತ್ರಾ - ಒಬ್ಬರಿಗೆ ರೂ. 6,000/-**

**ಸ್ಥಳಗಳು** : ಮಥುರಾ, ಬೃಂದಾವನ, ಆಗ್ರಾ, ದೆಹಲಿ, ಹರಿದ್ವಾರ, ಹೃಷೀಕೇಶ, ಬದರೀನಾಥ

**ಪ್ರವಾಸ 3**

**ದಿನಾಂಕ 24-09-2007 ರಿಂದ 6 ದಿನಗಳು - ದೆಹಲಿಯಿಂದ ದೆಹಲಿಗೆ.**

**ಬದರೀಯಾತ್ರಾ - ಒಬ್ಬರಿಗೆ ರೂ. 4,000/-**

**ಸ್ಥಳಗಳು** : ಹರಿದ್ವಾರ, ಹೃಷೀಕೇಶ ಮತ್ತು ಬದರೀನಾಥ

**ಪ್ರವಾಸ 4**

**ದಿನಾಂಕ 30-09-2007 ರಿಂದ 10 ದಿನಗಳು - ಕಾಶಿ / ಗಯಾ ಯಾತ್ರಾ**

**ಒಬ್ಬರಿಗೆ ರೂ. 6,000/-**

**ಸ್ಥಳಗಳು** : ಅಲಹಾಬಾದ್, ಅಯೋಧ್ಯಾ, ವಾರಣಾಸಿ (ಕಾಶಿ), ಗಯಾ, ಪುರಿ, ಕೊನಾರ್ಕ್, ಭುವನೇಶ್ವರ ಮತ್ತು ಧವಳಗಿರಿ

**ಪ್ರವಾಸ 5**

**ದಿನಾಂಕ 02-11-2007 ರಿಂದ 10 ದಿನಗಳು - ದೀಪಾವಳಿ ಸ್ಪೆಷಲ್**

**ಕಾಶೀ / ಗಯಾ ಯಾತ್ರಾ. ಒಬ್ಬರಿಗೆ ರೂ. 6,000/-**

**ಸ್ಥಳಗಳು** : ಅಲಹಾಬಾದ್, ಅಯೋಧ್ಯಾ, ವಾರಣಾಸೀ (ಕಾಶೀ), ಗಯಾ, ಪುರೀ, ಕೊನಾರ್ಕ್, ಭುವನೇಶ್ವರ ಮತ್ತು ಧವಳಗಿರಿ.

**ಪ್ರವಾಸ 6**

**ದಿನಾಂಕ 28-11-2007 ರಿಂದ 15 ದಿನಗಳು - ಪಂಚದ್ವಾರಕ ಯಾತ್ರಾ - ಒಬ್ಬರಿಗೆ ರೂ. 8,100/-**

**ಸ್ಥಳಗಳು** : ಅಹಮದಾಬಾದ್, ಮೂಲದ್ವಾರಕ, ಗೋಮತಿದ್ವಾರಕ, ಭೇಟ್‌ದ್ವಾರಕ, ಹರಿಸಿದ್ಧಿಮಾತ, ಪೋರಬಂದರ್, ಸೋಮನಾಥ, ಮಾತೃಗಯಾ, ಪುಷ್ಕರ, ಅಂಬಾಜಿ, ಉದಯಪುರ, ಶ್ರೀನಾಥದ್ವಾರಕ, ಕಂಗ್ರೋಲಿದ್ವಾರಕ.

ಸೂಚನೆ : ಮೇಲೆ ತಿಳಿಸಿದ ದರಗಳಲ್ಲಿ ಎರಡನೆಯ ದರ್ಜೆಯಲ್ಲಿ ರೈಲ್ವೇ ಸ್ಲೀಪರ್ ಛಾರ್ಜ್ ಮತ್ತು ಬದರಿ ತಲುಪುವ ಬಸ್ ಛಾರ್ಜು (2 × 2 ಡೀಲಕ್ಸ್) ಸ್ಥಳೀಯ ವೀಕ್ಷಣೆ ಖರ್ಚು ಮತ್ತು ಪ್ರತಿದಿನ 2 ಹೊತ್ತಿನ ಕಾಫಿ / ಟೀ, ಊಟದ ದರ ಹಾಗೂ ವಸತಿಯ ಖರ್ಚುಗಳೆಲ್ಲವೂ ಸೇರಿವೆ. ಪ್ರತಿದಿನ ಮಾಧ್ವ ಬ್ರಾಹ್ಮಣರಿಂದ ಅಡುಗೆ ತಯಾರಿಕೆಗಳನ್ನು ವ್ಯವಸ್ಥೆ ಮಾಡಲಾಗಿದೆ. ಕೇದಾರನಾಥಕ್ಕೆ ಹೋಗಬಯಸುವವರು ಹೆಚ್ಚಿನ ಖರ್ಚುಗಳನ್ನು ಪಾವತಿಸಬೇಕು.

**ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ**

**ಆರ್. ಪ್ರಸಾದ್/ಆರ್. ಪ್ರಭಾಕರ್,** ನಂ. 2, ಅಗಸ್ತಿಯಾರ್ ಸ್ಟ್ರೀಟ್, ತಾಂಬರಮ್ ಈಸ್ಟ್, ಚೆನ್ನೈ - 600 059 **ದೂ. 044-22390890, ಮೊಬೈಲ್ : 94440-87901** — **ಎ. ಭೀಮರಾವ್,** ನಂ. 10/10, 19ನೇ ಅಡ್ಡರಸ್ತೆ, ಇಟ್ಟಮಡು ಮುಖ್ಯರಸ್ತೆ, ಬಿ.ಎಸ್.ಕೆ. 3ನೇ ಹಂತ, ಬೆಂಗಳೂರು - 560 085, **ದೂ. 080-26729528** — **ಡಿ.ಆರ್. ರಾವ್,** 'ಘಟಿಕಾಚಲ', ಪ್ಲಾಟ್ ನಂ. 34, ಶಂಕರ್ ಕಾಲೋನಿ, 1ನೇ ಅಡ್ಡರಸ್ತೆ, ಬಳ್ಳಾರಿ - 583 101, **ದೂ. 08392-274107** — **ಎ. ಮುರಳೀಧರ ರಾವ್,** ಆಲೂರ್ ನಿವಾಸ್, ಅಸುಂಡಿ ಕಾಂಪೌಡ್, ಸ್ಟೇಷನ್ ರಸ್ತೆ, ಹೊಸಪೇಟೆ - 583 201, **ದೂ. 08394-224312**





॥ಶ್ರೀಹರಿ ಸರ್ವೋತ್ತಮ॥ ॥ಹರೇ ಶ್ರೀನಿವಾಸ॥ ॥ವಾಯುಜೀವೋತ್ತಮ॥

ನಮೋ ನಮೋ ಕಾರಣಕಾರಣಾಯ । ನಮೋ ನಮಃ ಪಾಲಕಪಾಲಕಾಯ ।
ನಮೋ ನಮಃ ಸರ್ವನಿಯಾಮಕಾಯ । ನಮೋ ನಮಃ ಸಾತ್ವಿಕಮುಕ್ತದಾಯ ।
ನಮೋ ನಮಸ್ತಾಮಸ ನಿತ್ಯದುಃಖ ಭೋಗಪ್ರದಾಯಾಖಿಲಲೋಕಪಾಯ ।

॥ ಸರ್ವೇ ಜನಾಃ ಸುಖಿನೋ ಭವಂತು ॥

ಯಾವುದೇ ಜಾತಕ ಅಥವಾ ವ್ಯಕ್ತಿಯ ಗ್ರಹಗತಿಗಳು ಕೇವಲ ಹರಿಚಿತ್ತದಂತೆ ನಡೆಯುತ್ತವೆಯೇ ಹೊರತು ಮನುಷ್ಯನ ಪ್ರಯತ್ನದಿಂದ ಅಲ್ಲವೇ ಅಲ್ಲ. ಆದ್ದರಿಂದ ಭಗವಂತನ ಆರಾಧನಾಕ್ರಮವನ್ನು ಬಿಟ್ಟು ಕೇವಲ ಒಬ್ಬ ವ್ಯಕ್ತಿಯು ತನ್ನ ಸ್ವಾರ್ಥಕ್ಕಾಗಿ ಮಾಡುವ ಜಪ, ತಪ, ಪೂಜೆಗಳೆಲ್ಲವೂ ವ್ಯರ್ಥ. 'ಸಕಲ ಗ್ರಹಬಲ ನೀನೇ ಸರಸಿಜಾಕ್ಷ' ಎಂಬಂತೆ ಎಲ್ಲ ಗ್ರಹಗಳ ಅಂತರ್ಯಾಮಿಯಾಗಿರುವ ಭಾರತೀರಮಣಮುಖ್ಯ-ಪ್ರಾಣಾಂತರ್ಗತನಾದ ಸಾಕ್ಷಾತ್ ಲಕ್ಷ್ಮೀನಾರಾಯಣನನ್ನು ನಿಷ್ಕಾಮ ಭಕ್ತಿಯಿಂದ 'ಒಂದು ದಳ ಶ್ರೀತುಳಸಿ ಬಿಂದು ಗಂಗೋದಕ'ದಿಂದ ಯಥಾಮತಿಯಾಗಿ ಪೂಜಿಸಿದರೂ ಸಹ ಶ್ರೀಹರಿಯು ನಮ್ಮ ಕಷ್ಟಗಳನ್ನು ದೂರಮಾಡುತ್ತಾನೆ. ಇಲ್ಲಿ ದೈವಪ್ರೇರಣೆಯಿಂದ ಜಾತಕಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಶಾಶ್ವತ ಪರಿಹಾರಗಳನ್ನು ಮಾಡಿಸಲಾಗುತ್ತದೆ. ಸರ್ವೇಂದ್ರಿಯಪ್ರೇರಕನಾದ ಶ್ರೀಹರಿಯ ಆಜ್ಞೆಯಿಂದಲೇ ಇಲ್ಲಿ ಫಲ ಹೇಳಲಾಗುತ್ತದೆ. ಜೀವನದಲ್ಲಿ ನೊಂದಿರುವ ಯಾವುದೇ ವ್ಯಕ್ತಿಯು ಯಾವುದೇ ಊರಿನಲ್ಲಿರಲಿ ಅವರು ಹರಿವಾಯುಗುರುಗಳ ಭಕ್ತರಾಗಿದ್ದಲ್ಲಿ ಅವರಿಗೆ ಅನಾನುಕೂಲವಿದ್ದ ಪಕ್ಷದಲ್ಲಿ ನಾವೇ ಸ್ವತಃ ಅವರ ಜಾಗಕ್ಕೆ ಹೋಗಿ ದೈವಸಂಕಲ್ಪದಿಂದ ದೋಷಪರಿಹಾರ ಮಾಡಿಸುವ ಇಚ್ಛೆಯನ್ನು ಹೊಂದಿದ್ದೇವೆ. ಪರಿಹಾರಕ್ಕಾಗಿ ಮುಖತಃ ಭೇಟಿಮಾಡಿ ಅಥವಾ ಪತ್ರಮುಖೇನ ಜಾತಕ ಕಳುಹಿಸಿಕೊಡಬಹುದು.

ಒಂದು ಪ್ರಶ್ನೆಗೆ 30 ರೂ., ಎರಡು ಪ್ರಶ್ನೆಗೆ 50 ರೂ. ಹಾಗೂ ಮೂರು ಪ್ರಶ್ನೆಗಳಿಗೆ 60 ರೂ.ಗಳನ್ನು ಸ್ಟಾಂಪ್ ಲಗತ್ತಿಸಿದ ಸ್ವ-ವಿಳಾಸವಿರುವ ಅಂಚೆ ಲಕೋಟೆಯೊಂದಿಗೆ ''ವ್ಯವಸ್ಥಾಪಕರು'' ಎಂದು ಬರೆದು ಕೆಳಗಿನ ವಿಳಾಸಕ್ಕೆ ಮನಿ ಆರ್ಡರ್ ಮಾಡಬೇಕು.

# ಮಾಧ್ವಮಂದಿರ ಜ್ಯೋತಿಷ್ಯಾಲಯ ಮತ್ತು ಧಾರ್ಮಿಕ ಕೇಂದ್ರ

**ಟಿ.ಆರ್. ಮಾಧವಾಚಾರ್**

**ಜ್ಯೋತಿಷ್ಕರು ಮತ್ತು ಪುರೋಹಿತರು**

ನಂ. 149, 'ಕಾನೀನ ನಿಲಯ', 5ನೇ ಅಡ್ಡರಸ್ತೆ, ಆರ್.ಕೆ. ಬಡಾವಣೆ
ಪದ್ಮನಾಭನಗರ, ಬೆಂಗಳೂರು

**ದೂರವಾಣಿ : 080-65351688, ಮೊಬೈಲ್ : 98444 75429**